ಅಚಲ

ಬಿಡಿಪ್ರತಿ : ರೂ. 8

ಮೇ–ಜೂನ್ - 2006

ಜಂಟಿ ಸಂಚಿಕೆ

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಅಚಲ

ಸಂಪುಟ – 21   ಸಂಚಿಕೆ : 4–5

ಸಂಪಾದಕ ಮಂಡಳಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ
ಶಾಂತಾ ನಾಗರಾಜ್
ಎಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ.ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

DTP : HARISH K. R. (99452 35936)

Printed by
LIPI MUDRANA
Bangalore - 560 004

ಪ್ರೀತಿಯ ಚಂದಾದಾರರೇ

ಅನಿವಾರ್ಯ ಕಾರಣಗಳಿಂದ ಮೇ ತಿಂಗಳಲ್ಲಿ 'ಅಚಲ' ತರಲಾಗಲಿಲ್ಲ. ಈಗ ಮೇ ಮತ್ತು ಜೂನ್ ತಿಂಗಳ ಜಂಟಿ ಸಂಚಿಕೆಯಾಗಿ ಅಚಲ ನಿಮ್ಮ ಕೈಯಲ್ಲಿರಿಸುತ್ತಿದ್ದೇವೆ. ದಯವಿಟ್ಟು ಕ್ಷಮಿಸಿ. ಎಂದಿನಂತೆ 'ಅಚಲ' ಓದುಗರ, ಚಂದಾದಾರರ, ಬರಹಗಾರರ ಬೆಂಬಲವನ್ನು ಬಹಳವಾಗಿ ಅಪೇಕ್ಷಿಸುತ್ತದೆ. ನಿಮ್ಮ ಚಂದಾ ಮುಗಿದ ನಂತರ ದಯವಿಟ್ಟು ನವೀಕರಿಸಿ ನಿಮ್ಮ ಆತ್ಮೀಯರಿಗೆ, ಸ್ನೇಹಿತರಿಗೆ ಚಂದಾ ಮಾಡಿಸಿ ಅಚಲದ ಬಳಗವನ್ನು ವಿಸ್ತರಿಸಿ.

ಅಚಲ ವಿಳಾಸ

108, ಸ್ಕೈಲೇನ್ ಸುರಭಿ, 14–ಪಿ
ವಿದ್ಯಾಪೀಠ ರಸ್ತೆ
ಬನಶಂಕರಿ 3ನೇ ಹಂತ
ಬೆಂಗಳೂರು – 560 085

ಸಂಪಾದಕೀಯ

ಎಲ್ಲಕ್ಕೂ ಹೆಣ್ಣೇ

ಕಳೆದ ತಿಂಗಳಲ್ಲಿ ಕಾಶ್ಮೀರದ ಮಹಿಳೆಯರು ದೊಡ್ಡ ಸುದ್ದಿಯಲ್ಲಿದ್ದರು. ಆದರೆ ಇದೇನು ಸಂತೋಷದ ಸುದ್ದಿಯಲ್ಲ. ಇಂತಹ ಘಟನೆಯು ಕಾಶ್ಮೀರದ ಒಳಗಿರಲಿ, ದೇಶದ ಯಾವುದೇ ಮೂಲೆಯಲ್ಲೂ ಪ್ರತಿಭಟನೆಗೆ ಅರ್ಹವಾದದ್ದು. ವೇಶ್ಯಾವೃತ್ತಿಯಲ್ಲಿ ತೊಡಗಿದ್ದ 'ಸಬೀನಾ'ಳ ವ್ಯೂಹವನ್ನು ಬೇಧಿಸಿದ ಪ್ರತಿಭಟಿಸಿದ ರೀತಿ ಮೇಲ್ನೋಟಕ್ಕೆ ಒಂದು ಕುಕೃತ್ಯದ ವಿರುದ್ಧದ ಆಕ್ರೋಶವಾಗಿ ಕಂಡರೂ ಅದು ಅಷ್ಟು ಸರಳವಾದ ಸಂಗತಿಯಲ್ಲ. ಈ ಘಟನೆಯಲ್ಲ. ಈ ಘಟನೆಗೆ ನೈತಿಕ ಆಯಾಮ ತೋರುವ ಧರ್ಮಿಷ್ಟರು, ರಾಜಕೀಯ ಲಾಭ ಮಾಡಿಕೊಳ್ಳುವ ಅವಕಾಶವಾದಿ ರಾಜಕಾರ್ಣಿಗಳು, ಹೆಣ್ಣಿನ ಅಸಹಾಯಕತೆಯನ್ನು ತಮ್ಮ ಕಾಮನೆಗಾಗಿ ಬಳಸಿಕೊಳ್ಳುವ ಪೀಡಕರು, ಒಟ್ಟಾರೆಯಾಗಿ ಒಂದು ದೊಡ್ಡ ಫಲಾನುಭವಿಗಳ ಸಮೂಹವೇ 'ಹೆಣ್ಣಿನ' ಸಂಗತಿನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಸುದ್ದಿ ಮಾಡಿದವು. ಈ ಸುದ್ದಿಯ ಹಿಂದಿನ ಕಾಳಜಿಗಳು ಎಷ್ಟು ಪ್ರಾಮಾಣಿಕವಾದವು ಎನ್ನುವುದನ್ನು ಚಿಂತಿಸಿ ನೋಡಿದಾಗ ಸಮಸ್ಯೆಯ ಸ್ವರೂಪದ ವಿಶ್ವರೂಪದರ್ಶನವಾಗುತ್ತದೆ.

ಮೊಬೈಲ್ ಫೋನಿನ ಮೂಲಕ ಮೂವತ್ತು ಸೆಕೆಂಡುಗಳ ಅಶ್ಲೀಲ ವಿಡಿಯೋ ತುಣುಕುಗಳು ಸಂಚಾರವಾಗುತ್ತಿದೆಯೆಂಬ ದೂರನ್ನು ಶ್ರೀನಗರದ ನಿವಾಸಿಗಳು ಪೊಲೀಸರಿಗೆ ನೀಡಿದಾಗ ಸಿಕ್ಕಿಬಿದ್ದ ಹದಿನಾರು ವರ್ಷದ ಬಾಲಕಿ ಪೊಲೀಸರಿಗೆ ಸತ್ಯವನ್ನರುಹಿದಳು : ಅವಳು ಮತ್ತು ಅವಳಂತಹ ನಲವತ್ತಮೂರು ಮಹಿಳೆಯರನ್ನು ಹಣದ ಮೂಲಕ ನಿಯಂತ್ರಿಸುತ್ತಿರುವ ಸಬೀನಾ ಹಮಿದ್ ಬುಲ್ಲಾಳ ಆಣತಿಯಂತೆ ಅವಳು ಆ ದಂಧೆಗೆ ಸಿಕ್ಕಿಬಿದ್ದುದ್ದು ಮತ್ತು ಅವರಲ್ಲಿ ಇಬ್ಬರು ರಾಜ್ಯ ಸಚಿವರೂ (ಇಬ್ಬರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು), ಗಡಿ ಭದ್ರತಾ ದಳದ ಅಧಿಕಾರಿ, ಹತ್ತು ಪೊಲೀಸರು ಮತ್ತು ಹಲವಾರು ಪ್ರಖ್ಯಾತ ವ್ಯಾಪಾರಸ್ಥರು ಈ ದಂದೆಯಲ್ಲ ಮುಳುಗಿದ್ದು ಎಲ್ಲವೂ ಸಬಿನಾಳ ಮನೆಯಲ್ಲಿ ಸುವ್ಯವಸ್ಥಿತವಾಗಿ ನಡೆಯುತ್ತಿತ್ತು. ಪೊಲೀಸರ ಕೈಗೆ ಸಿಕ್ಕಿಬಿದ್ದಬಾಲಕಿ ಅಪ್ರಾಪ್ತ ವಯಸ್ಕಳಾದುದರಿಂದ ಮತ್ತು ಅವಳೊಂದಿಗಿನ ಲೈಂಗಿಕ ವ್ಯವಹಾರಗಳು 'ಅತ್ಯಾಚಾರ' ವೆನಿಸುವುದರಿಂದ ಮತ್ತು ಇಂತಹ ವ್ಯೂಹದಲ್ಲಿ ತೊಡಗಿರುವವರು ಜನಪ್ರತಿನಿಧಿಗಳು ಮತ್ತು ಸಮಾಜದ 'ಗಣ್ಯ'ರೂ ಆಗಿರುವುದರಿಂದ ಈ ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಲಾಯಿತು. ಈ ಸಂದರ್ಭದಲ್ಲಿ ಕೆಲವು ಆರೋಪಿಗಳ ಹೆಸರನ್ನು ಸಿಬಿಐ ಇತ್ತೀಚೆಗೆ ಪ್ರಕಟಿಸಿದೆ ಕೂಡ.

ಈ ವಿಷಯ ತಿಳಿದ ನಾಗರೀಕರು ಬೀದಿಗಿಳಿದರು. ಈ ಸಮಯದಲ್ಲಿ ಸ್ವಹಿತಾಸಕ್ತ ಗುಂಪುಗೂ ಈ ಪ್ರತಿಭಟನೆಯಲ್ಲಿ ಸೇರಿಕೊಂಡಿವೆ. ಟಿ.ವಿ. ಮಾಧ್ಯಮದಲ್ಲಿ ಪ್ರಸಾರಗೊಂಡ ಪ್ರತಿಭಟನಾ ಪ್ರದರ್ಶನಗಳೂ ಕೂಡ ಕೆಲವೊಮ್ಮೆ ಆತಂಕ ಹುಟ್ಟಿಸುವಂತಿದ್ದವು. ''ಪಾಕಿಸ್ತಾನ ಚಿರಾಯುವಾಗಲಿ'' ಎಂಬ ಘೋಷಣೆಯೊಂದಿಗೆ ನೂರಾರು ಯುವಕರು ಕೋಲು, ಸುತ್ತಿಗೆಗಳೊಂದಿಗೆ ಬೀದಿಗಿಳಿದು ಸಬೀನಾ ಹಮೀದ್ ಬುಲ್ಲಾಳ ಮಹಡಿ ಮನೆಯನ್ನು ನೆಲಸಮ ಮಾಡಿದರು. ಮನೆಯೊಳಗಿನ ವಸ್ತುಗಳನ್ನು ದೋಚಿಸರು. ಹೆಣ್ಣುಗಳ ಮಾರಾಟದ ಈ ಯೋಜನೆಯನ್ನು ವಿರೋಧಿಸಿದ ಈ ಪ್ರತಿಭಟನೆಯ ಹಿಂದೆ 'ಸಮಾಜದ ನೈತಿಕತೆ'ಯನ್ನು ಕಾಪಾಡುತ್ತಿದ್ದೇವೆಂಬ ಕಾಳಜಿಯಿತ್ತೇ ? ಅಥವಾ ಅದಕ್ಕೂ ಹೆಚ್ಚಿನ ರಾಜಕೀಯ ಆಯಾಮಗಳಿದ್ದುವೇ ? – ಎಂಬುದು ಚರ್ಚೆಯ ವಿಷಯವಾಗಿದೆ.

ಇದೊಂದು ಹೀನಕೃತ್ಯ. ಪ್ರತಿಭಟನೆಗೆ ಅರ್ಹವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಕೃತ್ಯವನ್ನು ವಿರೋಧಿಸಿದ ಯುವಕರ ಘೋಷಣೆಗಳು ''ಅವರು ಅತ್ಯಾಚಾರಿಗಳ ವಿರುದ್ಧದ ಘೋಷಣೆಗಳನ್ನು ಮಾತ್ರ ಕೂಗುತ್ತಿರಲಿಲ್ಲ. ಜೊತೆಗೆ ಹೆಣ್ಣಿನ ಘನತೆಯನ್ನು ಅಪಮಾನ ಮಾಡಲು ಹೊರಟಿರುವ ಭಾರತೀಯರ ಹುನ್ನಾರ ಎಂಬ ಮಾತುಗಳನ್ನಾಡಿದರು'' ಎಂಬ ವಿಷಯವನ್ನು ಪ್ರಸ್ತಾಪಿಸಿರುವ ಕಾಶ್ಮೀರದ ವಿದ್ವಾಂಸರಾದ ಹಮೀದಾ ನಯೀಮ್ ತಮ್ಮ ಲೇಖನದಲ್ಲಿ 'ಇದು ಸರ್ಕಾರ ಪೋಷಿತ ವೇಶ್ಯಾವಾಟಿಕೆ' ಎಂಬರ್ಥದಲ್ಲಿ ಬರೆದಿದ್ದರು.

ಭಯೋತ್ಪಾದನೆಯಿಂದ ತತ್ತರಿಸುತ್ತಿರುವ ಕಾಶ್ಮೀರದಲ್ಲಿ ಮಹಿಳೆಯರು ಧಾರ್ಮಿಕ ಕಟ್ಟುಪಾಡುಗಳಿಲ್ಲದೆ ನಿರಾಳವಾಗಿ ಉಸಿರಾಡುವಂತಹ ಪರಿಸ್ಥಿತಿಯೇನಿಲ್ಲ. ಅಂತಹಪರಿಸ್ಥಿತಿಯ ವಿರುದ್ಧದ ಪ್ರತಿಭಟನೆಗಿಂತ ಈ ಪ್ರತಿಭಟನೆ ಪ್ರದರ್ಶಿಸಿದ ಅಬ್ಬರ ಮತ್ತು ಗಳಿಸಿಕೊಂಡ ಸಾರ್ವಜನಿಕ ಪ್ರಚಾರ – ಇವುಗಳು ಈ ಸಮಸ್ಯೆ ನೈತಿಕತೆಯ ಪ್ರಶ್ನೆಯಾಗಿ ಮಾತ್ರ ಉಳಿದಿವೆಯೇ ಎಂಬ ಅನುಮಾನವನ್ನು ನಮ್ಮ ಮುಂದಿಡುತ್ತದೆ. ಈ ಘಟನೆಯನ್ನು ಕುರಿತು ಟಿ.ವಿ. ಸಂದರ್ಶನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಮತ್ತು ಮೆಹಬೂಬಾ ಮಫ್ತಿಯಿಬ್ಬರೂ ಈ ಪ್ರಕರಣವನ್ನು ಖಂಡಿಸಿದರೂ, ಇದರ ವಿರುದ್ಧದ ಪ್ರತಿಭಟನೆಯನ್ನು ಇಡೀ ಕಾಶ್ಮೀರೀ ಮಹಿಳೆಯರ ಪ್ರತಿಷ್ಠೆಗೆ ಮಾಡಿದ ಅನುಮಾನವೆಂದೇ ಬಗೆದರು. 'ಹೆಣ್ಣು' ಎನ್ನುವ ಪದವಿದ್ದಲೆಲ್ಲಾ 'ನೈತಿಕತೆ' ಎನ್ನುವ ಶಬ್ದವೂ ಇರಬೇಕೆಂಬ ಪರಂಪರಾಗತ ಆಲೋಚನೆಯೇ ಇಲ್ಲಿ ಧ್ವನಿಸಿದೆ. ಆದರೆ ಈ ಸಮಸ್ಯೆಯನ್ನು ಇಡೀ ಸಮಾಜದ ಸಮಸ್ಯೆಯಾಗಿ ನೋಡದೆ ಹೆಣ್ಣಿನ 'ಪ್ರಶ್ನೆಯಾಗಿ ನೋಡಿದ್ದು ಮಾತ್ರ ಅತ್ಯಂತ ದುರದೃಷ್ಟಕರ.

– ಎನ್. ಗಾಯತ್ರಿ

ಉತ್ತರ ಬಯಸುವ ಕಾನೂನಿನ ಪ್ರಶ್ನೆಗಳು

-ಹೇಮಲತಾ ಮಹಿಷಿ

ಇತ್ತೀಚಿನ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದ ಮುಂದೆ, ಮಹಿಳೆಯರಿಗೆ ಸಂಬಂಧಿಸಿದಂತೆ ಅನೇಕ ಪ್ರಕರಣಗಳು ವಿಚಾರಣೆಗೆ ಬಂದಿದ್ದು ನಮ್ಮ ದೇಶದ ಮಹಿಳೆಯರ ಹಕ್ಕುಗಳು, ಹಿತಾಸಕ್ತಿ , ಸ್ಥಾನಮಾನಕ್ಕೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ತಲೆ ಎತ್ತಿವೆ, ಉತ್ತರ ಬಯಸುತ್ತಿವೆ.

ಕಾನೂನಿನ ಪ್ರಕಾರ ವಧುವಿನ ವಿವಾಹಯೋಗ್ಯ ವಯಸ್ಸು 18, ವರನ ವಿವಾಹಯೋಗ್ಯ ವಯಸ್ಸು 21 ಎಂದು ಟಿ.ವಿ.ಗಳಲ್ಲಿ ಕೇಳಿ-ಹೇಳಿ ಎಲ್ಲರಿಗೂ ಬಾಯಿಪಾಠವಾಗಿ ಬಿಟ್ಟಿದೆ. ಚಿಕ್ಕ ಮಗುವು ಕೂಡಾ ಅದನ್ನು ಹೇಳುತ್ತದೆ. ಎಂದ ಮೇಲೆ ದೆಹಲಿ ಉಚ್ಚ ನ್ಯಾಯಾಲಯ ಮತ್ತು ಆಂಧ್ರಪ್ರದೇಶ ಉಚ್ಚ ನ್ಯಾಯಾಲಯಗಳು 18ಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಯರ ವಿವಾಹವನ್ನು ಮಾನ್ಯ ಮಾಡಿ ತೀರ್ಪು ನೀಡಲು ಹೇಗೆ ಸಾಧ್ಯವಾಯಿತು ? ಇದನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದವರು ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ದೆಹಲಿ ರಾಜ್ಯ ಮಹಿಳಾ ಆಯೋಗ. ವಿವಾಹ ಯೋಗ್ಯ ವಯಸ್ಸು, ಅಪ್ರಾಪ್ತ/ಬಾಲಕಿ ಪದಗಳಿಗೆ ಇರುವ ಅರ್ಥವಿವರಣೆ ಇವುಗಳಿಗೆ ಸಂಬಂಧಿಸಿದಂತೆ ಇರುವ ಅನೇಕ ಕಾನೂನುಗಳಲ್ಲಿ ವ್ಯತ್ಯಾಸವಿರುವುದರಿಂದ ಗೊಂದಲ ಉಂಟಾಗಿ, ಉಚ್ಚ ನ್ಯಾಯಾಲಯಗಳು ಇಂತಹ ತೀರ್ಪು ನೀಡಿವೆ ಎಂಬುದು ಈ ಆಯೋಗಗಳ ಅಳಲು. ಮುಖ್ಯ ನ್ಯಾಯಮೂರ್ತಿಯವರನ್ನು ಒಳಗೊಂಡ ಸರ್ವೋಚ್ಚ ನ್ಯಾಯಾಲಯದ ಮೂವರು ನ್ಯಾಯಮೂರ್ತಿಗಳ ನ್ಯಾಯ ಪೀಠ ಇದರಲ್ಲಿ ಮಹತ್ವದ ಕಾನೂನಿನ ಪ್ರಶ್ನೆ ಉದ್ಭವಿಸಿದೆ ಎಂದು ಭಾವಿಸಿ ನ್ಯಾಯಾಲಯ ಕೇಂದ್ರ ಸರಕಾರಕ್ಕೆ ನೋಟೀಸು ಜಾರಿ ಗೊಳಿಸಿದೆ ಹಾಗೂ ಈ ವಿಷಯದ ಇತ್ಯರ್ಥಕ್ಕೆ ನೆರವು ನೀಡಲು ಕಾನೂನು ಆಯೋಗವನ್ನು ಕೇಳಿಕೊಂಡಿದೆ. ಉಚ್ಚ ನ್ಯಾಯಾಲಯದ ತೀರ್ಪುಗಳು ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸುತ್ತವೆ, ಈ ಬಗ್ಗೆ ಕಾನೂನಿನಲ್ಲಿರುವ ಗೊಂದಲವನ್ನು ಮತ್ತಷ್ಟು ಹೆಚ್ಚಿಸುತ್ತವೆ. ಅವುಗಳಲ್ಲಿರುವ ವೈರುಧ್ಯತೆಯನ್ನು ಎತ್ತಿ ತೋರಿಸುತ್ತದೆ ಹಾಗೂ ಅವು ಕಾನೂನನ್ನು ಹಾಸ್ಯಾಸ್ಪದ ಸ್ಥಿತಿಗೆ ನೂಕುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಆದರೆ, ಈಗಿರುವ ಕಾನೂನುಗಳ ಗೊಂದಲದಲ್ಲಿ, ಗೋಜಲಿನಲ್ಲಿ ಸರ್ವೋಚ್ಚ ನ್ಯಾಯಾಲಯವೂ ನಿಸ್ಸಹಾಯಕ ವಾಗಿದೆ. ಏಕೆಂದರೆ ಇಷ್ಟೆಲ್ಲಾ ಹೇಳಿರುವ ಸರ್ವೋಚ್ಚ ನ್ಯಾಯಾಲಯಕ್ಕೂ ಈ ಪ್ರಕರಣ ಇತ್ಯರ್ಥವಾಗುವವರೆಗೆ ನಡೆದುಹೋಗಿರುವ ಆ ವಿವಾಹಗಳನ್ನು 'ಸ್ಟೇ' ಮಾಡಲು, ಗಂಡ-ಹೆಂಡತಿಯರಾಗಿ ಒಟ್ಟಾಗಿ ಜೀವನ ಮಾಡದಂತೆ, ಲೈಂಗಿಕ ಸಂಬಂಧ ಹೊಂದದಂತೆ ನಿರ್ದೇಶಿಸಲು ಸಾಧ್ಯವಾಗಿಲ್ಲ. ಹಾಗಾಗಿ ಈಗಾಗಲೇ ನಡೆದು ಹೋಗಿರುವ ಅವಿವಾಹದ ದಂಪತಿಗಳು ಆತಂಕಪಡುವ ಅವಶ್ಯಕತೆ ಇಲ್ಲವೆಂದು ಆಶ್ವಾಸನೆ ನೀಡಿದೆ. ಆದರೆ ಬೇರೆ ಪ್ರಕರಣಗಳಲ್ಲಿ ಈ ಪ್ರಕರಣಗಳಿಂದ ಸ್ಫೂರ್ತಿ ಪಡೆಯದಂತೆ, ಎಂದರೆ ಅದನ್ನು ಆಧರಿಸಿ ತೀರ್ಪು ನೀಡದಂತೆ ಉಳಿದ ನ್ಯಾಯಾಲಯಗಳಿಗೆ ತಿಳಿಸಿದೆ. ಆದರೆ ಈ ಎಚ್ಚರಿಕೆ ಈಗಿರುವ ಗೊಂದಲಗಳನ್ನು ಮತ್ತಷ್ಟು ಗೊಂದಲಮಯವಾಗಿಸುತ್ತದೆ. ಕಾರಣ, ಈಗಿರುವ ಕಾನೂನುಗಳು. ಅವುಗಳ ತಿದ್ದುಪಡಿಯಾಗದಿದ್ದಲ್ಲಿ ನ್ಯಾಯಾಲಯಗಳಿಗೆ ಇಂತಹ ಬಾಲ್ಯ ವಿವಾಹಗಳನ್ನು ಎತ್ತಿ ಹಿಡಿಯದೇ, ಕಾನೂನುಬದ್ಧವೆಂದು ಹೇಳದೇ ಬೇರೆ ದಾರಿಯೇ ಇಲ್ಲ.

ಈಗಿರುವ ಬಾಲ್ಯವಿವಾಹ ತಡೆಗಟ್ಟುವಿಕೆ ಕಾನೂನಿನಂತೆ ಹುಡುಗಿಗೆ 18 ವಯಸ್ಸಿಗೆ ಮೊದಲು ವಿವಾಹ ಮಾಡುವುದು ಶಿಕ್ಷಾರ್ಹ ಅಪರಾಧ ಅಷ್ಟೇ! ಅದು ವಿವಾಹವನ್ನು ಅಸಿಂಧು ಗೊಳಿಸುವುದಿಲ್ಲ. ಹಾಗೆಯೇ ಭಾರತ ದಂಡ ಸಂಹಿತೆಯ ಪ್ರಕಾರ 12 ವರ್ಷ ಮೀರಿದ ಹೆಂಡತಿಯೊಂದಿಗೆ ಗಂಡ ದೈಹಿಕ ಸಂಪರ್ಕ ಹೊಂದುವುದು ಮಾನಭಂಗದ ಅಪರಾಧವೂ ಆಗುವುದಿಲ್ಲ. ಹಿಂದೂ ವಿವಾಹ ಅಧಿನಿಯಮದಲ್ಲಿ ಹುಡುಗಿಗೆ 15 ವರ್ಷಕ್ಕೆ ಮೊದಲು ವಿವಾಹ ಮಾಡಿದ್ದರೆ, ಅವಳು ತನಗೆ 18 ವರ್ಷ ತುಂಬುವ ಮೊದಲು ಆ ಮದುವೆಯನ್ನು ಧಿಕ್ಕರಿಸಿ ವಿವಾಹ ವಿಚ್ಛೇದನಕ್ಕೆ ನ್ಯಾಯಾಲಯಕ್ಕೆ ಅರ್ಜಿ ಹಾಕಬಹುದು. 18 ವರ್ಷ ತುಂಬಿದ ಮೇಲೆ ಆ ಕಾರಣಕ್ಕೆ ವಿಚ್ಛೇದನ ಕೇಳಲೂ ಬರುವುದಿಲ್ಲ. 18ರಿಂದ 21 ವರ್ಷದ ಒಳಗೆ ವಿವಾಹ ಮಾಡುವುದಿದ್ದರೆ ಅವಳ ಪೋಷಕರ ಒಪ್ಪಿಗೆ ಪಡೆಯಬೇಕು. ಇಲ್ಲವಾದರೆ 'ಕಿಡ್ನಾಪ್' ಅಪರಾಧವೆನಿಸುತ್ತದೆ. ಇದಕ್ಕೆ ಶಿಕ್ಷೆ ಇದೆ. ಆದರೆ ಎಲ್ಲಿಯೂ ಅಂತಹ ವಿವಾಹಗಳು 'ಅಸಿಂಧು', 'ಕಾನೂನು ಬಾಹಿರ', 'ಅನೂರ್ಜಿತ', 'ಕಾನೂನಿನ ದೃಷ್ಟಿಯಲ್ಲಿ ವಿವಾಹವೇ ಅಲ್ಲ' ಎಂದು ಘೋಷಿಸಲ್ಪಟ್ಟಿಲ್ಲ. ಹಾಗಾಗಿ ಪೋಷಕರು ತಮ್ಮ ಅಪ್ರಾಪ್ತ ವಯಸ್ಕ ಮಗಳನ್ನು ಕಿಡ್ನಾಪ್ ಮಾಡಿಕೊಂಡು ಹೋಗಿ ತಮ್ಮ ಒಪ್ಪಿಗೆ ಇಲ್ಲದೇ ವಿವಾಹವಾಗಿದ್ದಾರೆ ಎಂದು ದೂರು ಸಲ್ಲಿಸಿದರೂ, ಆ ಕಿಡ್ನಾಪ್ ಅಪರಾಧಕ್ಕೆ ಹುಡುಗನಿಗೆ, ಅವನ ಸಹಾಯಕರಿಗೆ ಶಿಕ್ಷೆಯಾಗಬಹುದೇ ಹೊರತು ಸರಿಯಾಗಿ ನಡೆದು ಹೋದ ವಿವಾಹ ಅನೂರ್ಜಿತವಾಗುವುದಿಲ್ಲ. ಹಾಗಾಗಿ ಅಪ್ರಾಪ್ತ ವಯಸ್ಕ ಹುಡುಗಿ ನ್ಯಾಯಾಲಯದಲ್ಲಿ ಬಂದು ನಿಂತು, ನಾನು ಆ ಹುಡುಗನನ್ನು ಪ್ರೀತಿಸಿ ಸ್ವ ಇಚ್ಛೆಯಿಂದಲೇ ಅವನೊಂದಿಗೆ ಹೋಗಿ

ವಿವಾಹವಾದ, ಅವನ ಜೊತೆಗೇ ಇರಲು ಇಚ್ಛಿಸುತ್ತೇನೆ ಎಂದು ಹೇಳಿದರೆ ನ್ಯಾಯಾಲಯ ಆ ವಿವಾಹ ಅನೂರ್ಜಿತ ಎಂದು ಘೋಷಿಸಲಾರದು. ಹೆಚ್ಚೆಂದರೆ ಶಿಕ್ಷೆ ವಿಧಿಸಬಹುದು. ಶಿಕ್ಷೆಯ ನಂತರ ಅವರು ಪುನಃ ಒಟ್ಟಾಗಿ ಬಾಳಬಹುದು. ಇಲ್ಲಿ ಹುಡುಗನಿಗೆ ಶಿಕ್ಷೆ ವಿಧಿಸಿದರೆ ಆ ಹುಡುಗಿಯ ಬಾಳು ಅತಂತ್ರವಾಗುತ್ತದೆ ಎನ್ನುವ ಕನಿಕರವೂ ಕೆಲಸ ಮಾಡುತ್ತದೆ.

ಹಾಗಾದರೆ ಇದಕ್ಕೆ ಉತ್ತರವೇನು ? 18 ವರ್ಷಕ್ಕೆ ಮೊದಲು ಆದ ವಿವಾಹಗಳು ಕಾನೂನುಬಾಹಿರವಾಗುತ್ತದೆ. ಅದಕ್ಕೆ ಕಾನೂನಿನ ಮನ್ನಣೆ ಇಲ್ಲ ಎಂದು ಕಾನೂನಿನ ತಿದ್ದುಪಡಿ ಮಾಡಲು ನಮ್ಮ ದೇಶದಲ್ಲಿರುವ ಪರಿಸ್ಥಿತಿ ಸೂಕ್ತವಾಗಿದೆಯೇ ? ಇಂದಿಗೂ ಧರ್ಮ, ಸಂಪ್ರದಾಯದ ಹೆಸರಿನಲ್ಲಿ ಸಾವಿರಾರು ಬಾಲ್ಯ ವಿವಾಹಗಳು ನಡೆಯುತ್ತಿರುವ ದೇಶ ನಮ್ಮದು. ಕಾನೂನಿನ ಮೂಲಕ ಇದನ್ನು ನಿಲ್ಲಿಸಲು ಸಾಧ್ಯವೇ ? ನಿಲ್ಲಿಸಲು ಸಾಧ್ಯವಾಗದಿದ್ದರೆ ಇಂತಹ ಸಾವಿರಾರು ವಿವಾಹಗಳು ಕಾನೂನಿನಲ್ಲಿ ಅನೂರ್ಜಿತವಾಗುವುದಿಲ್ಲವೇ, ಹಾಗೆಯೇ ಇಂತಹ ಸಂದಿಗ್ಧತೆ ಯನ್ನು ದುರುಪಯೋಗಪಡಿಸಿಕೊಂಡು ಅಂತಹ ಮೊದಲ ಹೆಂಡತಿಯರನ್ನು ತ್ಯಜಿಸಿ ಎರಡನೆಯ ವಿವಾಹವಾಗಲು ಕಾನೂನೇ ಪ್ರೋತ್ಸಾಹಿಸಿ ದಂತಾಗುವುದಿಲ್ಲವೇ, ಆ ಮೊದಲ ಅನೂರ್ಜಿತ ವಿವಾಹದ ಮಕ್ಕಳ ಭವಿಷ್ಯವೇನು, ಹಕ್ಕುಗಳೇನು - ಇಂತಹ ನಾನಾ ಸಮಸ್ಯೆಗಳಿಗೆ ಪರಿಹಾರ ಹುಡುಕಿ ಈ ಬಗ್ಗೆ ಕಾನೂನಿನ ತಿದ್ದುಪಡಿಯ ಮಾರ್ಗ ಕಂಡುಕೊಳ್ಳ ಬೇಕಾಗುತ್ತದೆ. ಸರ್ವೋಚ್ಚ ನ್ಯಾಯಾಲಯಕ್ಕೂ ತನ್ನ ಮುಂದಿರುವ ಸಮಸ್ಯೆಯ ಗಂಭೀರತೆ, ಜಟಿಲತೆಯ ಬಗ್ಗೆ ಅರಿವಿದೆ. ಮಹಿಳಾ ಸಂಘ- ಸಂಸ್ಥೆಗಳೂ ಈ ಬಗ್ಗೆ ಯೋಚಿಸಿ, ಸೂಕ್ತ ಪರಿಹಾರ ಸೂಚಿಸುವುದು ಅವಶ್ಯಕ.

ಮುಸ್ಲಿಂ ಮಹಿಳೆಯರ ವಿವಾಹ-ವಿಚ್ಛೇದನಕ್ಕೆ ಸಂಬಂಧಿಸಿ ದಂತೆಯೂ ಸರ್ವೋಚ್ಚ ನ್ಯಾಯಾಲಯದ ಮುಂದೆ ಮಹತ್ವದ ಪ್ರಕರಣಗಳು ಬಂದಿವೆ. ನಿದ್ದೆಯ ಮಂಪರಿನಲ್ಲಿ ಮೂರುಬಾರಿ ತಲ್ಲಾಕ್ ಹೇಳಿದ ಗಂಡ ಎದ್ದಮೇಲೆ ಅದನ್ನು ಮರೆತು ಹೆಂಡತಿ ಯೊಂದಿಗೆ ಬಾಳಲು ಸಿದ್ಧನಿದ್ದರೂ, ಹೆಂಡತಿ ಗಂಡನನ್ನು ಬಿಡಲು ಸಿದ್ಧಳಿಲ್ಲದ್ದಿರೂ ಆ ಊರಿನ ಮೌಲ್ವಿಗಳೂ ಅವರ ನಡುವೆ ವಿವಾಹ ವಿಚ್ಛೇದನವಾಗಿದೆ. ಅವರು ಗಂಡ-ಹೆಂಡತಿಯರಾಗಿ ಒಟ್ಟಾಗಿ ಬಾಳಕೂಡದು ಅದು ತಮ್ಮ ಧಾರ್ಮಿಕ ಕಾನೂನಿಗೆ ವಿರುದ್ಧ ಎಂದು ತೀರ್ಪು ನೀಡಿದ್ದಾರೆ. ಅವಳು ಪುನಃ ಇದೇ ಗಂಡನೊಂದಿಗೆ ಬಾಳುವುದಿದ್ದಲ್ಲಿ ಹೆಂಡತಿ ಮತ್ತೊಬ್ಬನನ್ನು ವಿವಾಹವಾಗಿ, ಅವನೊಂದಿಗಿದ್ದು, ಅವನಿಂದ ವಿಚ್ಛೇದನ ಪಡೆದು, ನಂತರ ಮೊದಲ ಗಂಡನನ್ನು ವಿವಾಹವಾಗಿ ಅವನೊಂದಿಗಿರಬಹುದೆಂದು ತಿಳಿಸಿದ್ದಾರೆ. ಇದರಿಂದ ಶಾಕ್ ಆದ ಆ ದಂಪತಿಗಳು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ರಿಜಿಸ್ಟರ್ ವಿವಾಹವಾಗಿದ್ದಾರೆ. ಆದರೆ ಈ ವಿವಾಹವನ್ನು ಮಾನ್ಯ ಮಾಡುವುದಿಲ್ಲವೆಂದು ಮೌಲ್ವಿಗಳು ತಿಳಿಸಿದ್ದಾರೆ. ಈ ಪ್ರಕರಣವೂ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿದ್ದು ಈ ದಂಪತಿಗಳಿಗೆ ಒಟ್ಟಿಗೆ ಬಾಳಲು ರಕ್ಷಣೆ ಕೊಡಬೇಕೆಂದು ಜಿಲ್ಲಾಧಿ ಕಾರಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ ಹಾಗೂ ಯಾರಿಗೂ ಅವರನ್ನು ಒತ್ತಾಯದಿಂದ ಬೇರ್ಪಡಿಸಲು ಕಾನೂನಿನಲ್ಲಿ ಅವಕಾಶವಿಲ್ಲವೆಂದು ತಿಳಿಸಿದೆ. ಇಲ್ಲಿ ನ್ಯಾಯಾಲಯದ ಜಾಣ್ಮೆಯಿಂದ ಅವರು ಒಟ್ಟಾಗಿ ಬಾಳುವ ಹಕ್ಕಿನ ಬಗ್ಗೆ ತಿಳಿಸಿದೆಯೇ ಹೊರತು, ಅವರ ವಿವಾಹದ ಊರ್ಜಿತತೆ/ಅನೂರ್ಜಿತತೆಯ ಬಗ್ಗೆ ತೀರ್ಪು ನೀಡಿಲ್ಲ, ಏಕೆಂದರೆ, ಪುನಃ ಷಾ ಬಾನೂ ಪ್ರಕರಣದ ಪುನರಾವರ್ತನೆ ಆಗುವ ಸಾಧ್ಯತೆಯಿದೆ. ನಮ್ಮ ದೇಶದಲ್ಲಿ ಗಂಡು-ಹೆಣ್ಣು ಒಟ್ಟಿಗೇ ವಾಸಿಸಲು ಕಾನೂನಿನ ಅಡ್ಡಿ ಇಲ್ಲ, ಎಲ್ಲ ಅನೈತಿಕ ಸಂಬಂಧಗಳು ಶಿಕ್ಷಾರ್ಹವೂ ಅಲ್ಲ, ಹಾಗಾಗಿ ಯಾರಿಗೂ ಒತ್ತಾಯವಾಗಿ ಬೆದರಿಸಿ ಅವರನ್ನು ಬೇರ್ಪಡಿಸಲು ಸಾಧ್ಯವಿಲ್ಲ.

ಇದೇ ಸಮುದಾಯಕ್ಕೆ, ಇಂತಹ ವಿಷಯಕ್ಕ ಸಂಬಂಧಿಸಿದಂತೆ ಇಮ್ರಾನಾ ಮಾನಭಂಗಕ್ಕೆ ಸಂಬಂಧಿಸಿದ ತೀರ್ಪಿನ ಫಲಿತಾಂಶವಾಗಿ ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಸರ್ವೋಚ್ಚ ನ್ಯಾಯಾಲಯದ ಮುಂದಿದ್ದು, ವಕೀಲರೊಬ್ಬರು ನಮ್ಮ ದೇಶದ ನ್ಯಾಯಾಡಳಿತ ವ್ಯವಸ್ಥೆಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುತ್ತಿರುವ ಇಸ್ಲಾಮಿಕ್ ಮತ್ತು ಷರೀಯತ್ ನ್ಯಾಯಾಲಯಗಳನ್ನು ರದ್ದುಗೊಳಿಸಬೇಕೆಂದು ಕೋರಿದ್ದಾರೆ. ಇಮ್ರಾನಾ ಪ್ರಕರಣದಲ್ಲಿ ದಾರುಲ್ ಉಲೂಮ್ ನೀಡಿರುವ ಫತ್ವಾವನ್ನು ಇದರಲ್ಲಿ ಉದಾಹರಣೆಯಾಗಿ ಉಲ್ಲೇಖಿಸಲಾಗಿದೆ. ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ತಾನು ಮಹಾರಾಷ್ಟ್ರದ ಥಾಣೆ, ರಾಜಸ್ಥಾನದ ಅಕೋಲಾ ಘೋಲಿಯಾ, ಮಧ್ಯಪ್ರದೇಶದ ಇಂದೂರ್, ದಕ್ಷಿಣ ಮತ್ತು ಪಶ್ಚಿಮ ದೆಹಲಿ, ಪಶ್ಚಿಮ ಬಂಗಾಳದ ಅಸನಸೋಲ್ ಮತ್ತು ಪ್ರರೂಲಿಯಾ, ಉತ್ತರ ಪ್ರದೇಶದ ಲಕ್ನೋ ಮತ್ತು ಸೀತಾಪುರಗಳಲ್ಲಿ ತಾನು ದಾರುಲ್ ಬಾಜಾ (ಮುಸ್ಲಿಂ ಕೋರ್ಟ್‌ಗಳು)ಗಳನ್ನು ಸ್ಥಾಪಿಸುತ್ತಿರುವುದಾಗಿ ಹೇಳಿರುವುದನ್ನು ಇದರಲ್ಲಿ ಪ್ರಸ್ತಾಪಿಸಲಾಗಿದೆ. ಇಮಾನಾ ಪ್ರಕರಣದ ಫತ್ವಾದಿಂದಾಗಿ ದೇಶದ ಕ್ರಿಮಿನಲ್ ಕೋರ್ಟ್‌ಗಳು ಕಾರ್ಯನಿರ್ವಹಿಸಲು ಅಡ್ಡಿಯಾಗುತ್ತದೆ ಎಂದು ಆಪಾದಿಸ ಲಾಗಿದೆ. ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರ್ಕಾರದ ಹಾಗೂ ಮುಸ್ಲಿಂ ಪರ್ಸನಲ್ ಲಾ ಬೋರ್ಡಿಗೆ ನೋಟೀಸ್ ನೀಡಿದೆ.

ಇಂತಹ ಸಮಾನಾಂತರ ಮುಸ್ಲಿಂ ನ್ಯಾಯಾಲಯದ ಶರೀಯತ್ ಕೋರ್ಟ್‌ಗಳ ಬಗ್ಗೆ ದೇಶಾದ್ಯಂತ ಮಾಹಿತಿ ಸಂಗ್ರಹಿಸಿ ನ್ಯಾಯಾಲಯಕ್ಕೆ ಒಪ್ಪಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ಇದೊಂದು ಬಹಳ ಗಂಭೀರವಾದ ಸಮಸ್ಯೆ. ಜನರ

ಧಾರ್ಮಿಕ ಭಾವನೆಗೆ ಸಂಬಂಧಿಸಿದ ಸಮಸ್ಯೆ. ರಾಜಕಾರಣಿಗಳು, ಮೂಲಭೂತವಾದಿಗಳು ಜನರ ಭಾವನೆಗಳನ್ನು ಹೊಡೆದೆಬ್ಬಿಸಲು ಬಳಸಿಕೊಳ್ಳಬಹುದಾದ ಸಮಸ್ಯೆ. ಸರ್ವೋಚ್ಚ ನ್ಯಾಯಾಲಯ ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕಾದ ಸಮಸ್ಯೆ.

ನಮ್ಮ ದೇಶದಲ್ಲಿ ವಿವಾಹ, ವಿಚ್ಛೇದನ, ಜೀವನಾಂಶ, ಮಕ್ಕಳ ಪೋಷಣೆ, ಆಸ್ತಿಹಕ್ಕಿಗೆ ಸಂಬಂಧಿಸಿದಂತೆ ಬೇರೆ ಬೇರೆ ಧರ್ಮದವರಿಗೆ ಅವರದೇ ಆದ ವೈಯಕ್ತಿಕ, ಮತೀಯ ಕಾನೂನು ಗಳಿದ್ದರೂ, ಎಲ್ಲರಿಗೂ ಏಕರೂಪದ ಕ್ರಿಮಿನಲ್ ಕಾನೂನು ಅನ್ವಯಿಸುತ್ತದೆ. ಹಾಗಾಗಿ ಭಾರತ ದಂಡ ಸಂಹಿತೆಯಲ್ಲಿ ಹೇಳಿರುವ ಅಪರಾಧಗಳಿಗೆ ದೇಶದ ಕ್ರಿಮಿನಲ್ ನ್ಯಾಯಾಲಯ ಗಳಿಗೆ ವಿಚಾರಣೆ ನಡೆಸುವ, ಶಿಕ್ಷೆ ವಿಧಿಸುವ ಅಧಿಕಾರವಿದೆ. ಹಾಗಾಗಿ ಮಾವ ಸೊಸೆಯ ಮೇಲೆ ನಡೆಸಿದ ಅತ್ಯಾಚಾರ ಭಾರತ ದಂಡ ಸಂಹಿತೆಯ ವ್ಯಾಪ್ತಿಯಲ್ಲಿ ಶಿಕ್ಷೆಗೆ ಗುರಿಯಾಗಬೇಕಾದ ಅಪರಾಧವಾಗಿದೆ ಹಾಗೂ ಅದರ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಅಧಿಕಾರವ್ಯಾಪ್ತಿ ಕ್ರಿಮಿನಲ್ ನ್ಯಾಯಾಲಯಗಳಿಗೆ ಮಾತ್ರ ಇರುತ್ತದೆ. ಇದರಲ್ಲಿ ಯಾವುದೇ ಸಮಾನಾಂತರ ನ್ಯಾಯಾಲಯಕ್ಕೆ ಅಧಿಕಾರ ವಿರುವುದಿಲ್ಲ ಹಾಗೂ ದೇಶದ ನ್ಯಾಯಾಲಯಗಳಿಗೆ ತಲೆ ಬಾಗುವುದಿಲ್ಲ ಎಂದು ಹೇಳುವ ಹಕ್ಕು ಯಾರಿಗೂ ಇರುವುದಿಲ್ಲ. ಅಲ್ಲದೇ, ಮುಖ್ಯವಾಗಿ ಆ ಸಮಾನಾಂತರ ಧಾರ್ಮಿಕ ನ್ಯಾಯಾಲಯದ ಅಭಿಪ್ರಾಯ, ತೀರ್ಪನ್ನು ಯಾರ ಮೇಲೂ ಬಲವಂತವಾಗಿ ಹೇರುವುದು ಅವರ ಮೂಲಭೂತ ಹಕ್ಕಿಗೆ, ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ. ಅದಕ್ಕೆ ಕಾನೂನಿನ ಬೆಂಬಲವಿಲ್ಲ.

1994ರಲ್ಲಿ ಸ್ತ್ರೀಭ್ರೂಣ ಹತ್ಯೆ ನಿಷೇಧಿಸಿ ಕಾನೂನು ಮಾಡಿದ್ದರೂ ಈವರೆಗೆ ಅದರ ಅನುಷ್ಠಾನ ಮಾತ್ರ ಆಗಿರಲಿಲ್ಲ. ಒಂದೇ ಒಂದು ಪ್ರಕರಣವೂ ಆ ಕಾನೂನಿನಡಿ ದಾಖಲಾಗಿ, ಅಪರಾಧಿಗಳಿಗ ಶಿಕ್ಷೆಯಾಗಿರಲಿಲ್ಲ. ಈ ಮಧ್ಯೆ 5 ಮಿಲಿಯನ್ ಹೆಣ್ಣುಭ್ರೂಣ ಹತ್ಯೆ ನಡೆದುಹೋಗಿದೆ. ಕಾರ್ಮೋಡದ ಅಂಚಿನಲ್ಲಿ ಬೆಳಕು ಮೂಡಿದ್ದು, ಇತ್ತೀಚೆಗೆ ಹರಿಯಾಣಾದ ಸಬ್-ಡಿವಿಜನ್ ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯ ದೇಶದಲ್ಲಿಯೇ ಮೊದಲ ಬಾರಿಗೆ ಈ ಕಾನೂನಿನಡಿ ವೈದ್ಯ ಮತ್ತು ಅವರ ಸಹಾಯಕನಿಗೆ ಈ ಕಾನೂನಿನ ಉಲ್ಲಂಘನೆ ಮಾಡಿದ್ದಕ್ಕಾಗಿ 2 ವರ್ಷಗಳ ಸಜಾ ಹಾಗೂ 5,000 ರೂಗಳ ದಂಡ ವಿಧಿಸಿದೆ.

ಈ ಪ್ರಕರಣದಲ್ಲಿ ಹರಿಯಾಣಾದ ಸರ್ಕಾರಿ ವೈದ್ಯರ ತಂಡವೊಂದು ಮೂವರು ರೋಗಿಗಳನ್ನು ಈ ವೈದ್ಯರ ಬಳಿ ಅಲ್ಟ್ರಾಸೌಂಡ್ ಪರೀಕ್ಷೆಗಾಗಿ ಕಳಿಸಿಕೊಟ್ಟಾಗ ಆ ವೈದ್ಯ ಪರೀಕ್ಷಿಸಿ ಗರ್ಭದಲ್ಲಿರುವ ಲಿಂಗಪತ್ತೆ ಮಾಡಿ ಅದನ್ನು ಆ ರೋಗಿಗೆ ತಿಳಿಸಿದ್ದ ಅದನ್ನು ವಿಡಿಯೋದಲ್ಲಿ ಸೆರೆಹಿಡಿಯಲಾಗಿತ್ತು ಹಾಗೂ ಆ ವೈದ್ಯ ಹಾಗೂ ಸಹಾಯಕನನ್ನು ಈ ಕೆಲಸ ಮಾಡುವಾಗಲೇ ಹಿಡಿಯಲಾಗಿತ್ತು ಹಾಗೂ ರೋಗಿ ಕೊಟ್ಟ ಮೊದಲೇ ಗುರುತು ಮಾಡಿದ್ದ ನೋಟುಗಳು ಆ ವೈದ್ಯನ ಜೇಬಿನಲ್ಲಿ ಸಿಕ್ಕಿದ್ದವು ಹಾಗೂ ಅವರಿಗೆ ನ್ಯಾಯಾಲಯದಲ್ಲಿ ಶಿಕ್ಷೆ ವಿಧಿಸಲು ಅವಕಾಶ ವಾಯಿತು. ದೇಶದ ಅದರಲ್ಲೂ ಹರಿಯಾನಾ ರಾಜ್ಯದ ಲಿಂಗ ಅನು ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡ ನ್ಯಾಯಾಲಯ "ಇಂತಹ ಅಪರಾಧಿಗಳನ್ನು ಹಾಗೆಯೇ ಬಿಟ್ಟರೆ ಮುಂದೊಮ್ಮೆ ಹೆಣ್ಣು ಮಕ್ಕಳೇ ಇಲ್ಲದಂತಾಗಬಹುದು" ಎಂದು ಉದ್ಗರಿಸಿರುವುದು ಸಮಯೋಚಿತವಾಗಿದೆ.

ದೇಶದ ಸರ್ವೋಚ್ಚ ನ್ಯಾಯಾಲಯವಲ್ಲದೇ ಎಲ್ಲಾ ಕೆಳಹಂತದಲ್ಲಿರುವ ನ್ಯಾಯಾಲಯದಲ್ಲಿಯೂ ಇಂತಹ ತೀರ್ಪು ಬಂದಿರುವುದು ಶ್ಲಾಘನೀಯ. ಈವರೆಗೆ ಈ ಕಾನೂನಿನ ಕೆಳಗೆ ದಾಖಲೆ ಸರಿಯಾಗಿಇಟ್ಟುಕೊಂಡಿಲ್ಲ ಎನ್ನುವ ಸಣ್ಣ-ಪುಟ್ಟ ಕಾರಣ ಗಳಿಗೆ ಮಾತ್ರ ದಂಡ ವಿಧಿಸಲಾಗಿತ್ತು. ಸೆರೆವಾಸದ ಶಿಕ್ಷೆ ವಿಧಿಸಿ ರುವುದು ಇದು ಮೊದಲ ಬಾರಿ. ಹರಿಯಾಣಾ ಹಾಗೂ ನೆರೆಯ ಪಂಜಾಬ್ ರಾಜ್ಯಗಳು ದೇಶದಲ್ಲಿಯೇ ಅತ್ಯಂತ ಕಡಿಮೆ ಅನುಪಾತದಲ್ಲಿ ಹೆಣ್ಣುಮಕ್ಕಳನ್ನು ಹೊಂದಿವೆ. ಒಂದು ಅಂದಾಜಿನ ಪ್ರಕಾರ ಹರಿಯಾಣಾ ರಾಜ್ಯದಲ್ಲಿ ಪ್ರತಿವರ್ಷ 25,000 ಹೆಣ್ಣು ಭ್ರೂಣಹತ್ಯೆ ಮಾಡಲಾಗುತ್ತಿದೆ. ಪಂಜಾಬ್‌ನಲ್ಲಿಇದರ ಸಂಖ್ಯೆ ಸುಮಾರು 40,000. ದೆಹಲಿಯಲ್ಲಿ 23,000. ಎಂದಮೇಲೆ ಇಡೀ ದೇಶದಲ್ಲಿ ಪ್ರತಿವರ್ಷ ಎಷ್ಟು ಹೆಣ್ಣು ಮಕ್ಕಳು ಮಾಯ ವಾಗುತ್ತಿದ್ದಾರೆ ಎಂಬುದನ್ನು ಊಹಿಸಬಹುದು. ಇಂತಹ ಪ್ರಕರಣಗಳು ಹೆಚ್ಚು-ಹೆಚ್ಚು ಬೆಳಕಿಗೆ ಬಂದು ವೈದ್ಯರಿಗೆ ಜೈಲುವಾಸದ ಶಿಕ್ಷೆ ವಿಧಿಸಿದಾಗಲೇ ಇದರಲ್ಲಿ ಸುಧಾರಣೆ ನಡೆಸಲು ಸಾಧ್ಯ. ಇತ್ತೀಚೆಗೆ ದಾದಿಯರ ಸಂಘ ಹೆಣ್ಣು ಭ್ರೂಣಹತ್ಯೆಯ ವಿರುದ್ಧ ಹೋರಾಡಲು, ಅದನ್ನು ಬೆಳಕಿಗೆ ತರಲು ಸಹಾಯ ಮಾಡುವುದಾಗಿ ಹೇಳಿರುವುದು ಸ್ವಾಗತಾರ್ಹ.

ಮತ್ತೊಂದು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ವಿವಾಹ ಪೂರ್ಣವಾಗಿ ಮುರಿದುಬಿದ್ದ ಕಾರಣಕ್ಕಾಗಿ ವಿವಾಹ ವಿಚ್ಛೇದನ ಪಡೆಯಲು ಸಾಧ್ಯವಾಗುವಂತೆ ಕಾನೂನನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ. ಹತ್ತಾರು ವರ್ಷಕಾಲ ಗಂಡ-ಹೆಂಡತಿ, ಬೇರೆ ಬೇರೆಯಾಗಿ ವಾಸಿಸುತ್ತಿದ್ದು ಪರಸ್ಪರ ವಿರುದ್ಧ ದೋಷಾರೋಪಣೆ ಮಾಡುತ್ತಾ, ಕೇಸುಗಳನ್ನು ದಾಖಲು ಮಾಡುತ್ತಾ ದ್ವೇಷ ಬೆಳೆಸಿಕೊಂಡಾಗ ಮುಂದೆ ಪುನಃ ಒಂದಾಗಿ ಬಾಳುವ ಅವಕಾಶವೇ ಇಲ್ಲದೇ ವಿವಾಹ ಪೂರ್ಣ ಮರಿದುಬಿದ್ದಾಗ, ಅಂತಹ ವಿವಾಹ ಸಂಬಂಧವನ್ನು ಉಳಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಯಾರಿಗೂ ಅದರಿಂದ ಲಾಭವಿಲ್ಲ. ಅಲ್ಲದೆ ಇಂತಹ ಪ್ರಕರಣಗಳಲ್ಲೂ ವಿವಾಹ ವಿಚ್ಛೇದನ ನಿರಾಕರಿಸಿದರೆ, ಅನೈತಿಕ ಜೀವನ ನಡೆಸಲು ಎಡೆ ಮಾಡಿಕೊಟ್ಟಂತಾಗುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯ

ಪಟ್ಟು ಈ ಸೂಚನೆ ಕೊಟ್ಟಿದೆ.

ಈಗಿರುವ ಕಾನೂನಿನಂತೆ ಗಂಡ-ಹೆಂಡತಿ ಇಬ್ಬರೂ ಒಪ್ಪಿಕೊಂಡು ವಿಚ್ಛೇದನಕ್ಕಾಗಿ ಜಂಟಿ ಅರ್ಜಿ ಹಾಕಬಹುದು. (ಮುಸ್ಲಿಂ ಕಾನೂನು ಹೊರತುಪಡಿಸಿ). ಒಪ್ಪಿಗೆ ಇಲ್ಲದಿದ್ದರೆ ಗಂಡ ಅಥವಾ ಹೆಂಡತಿ ಎದುರುದಾರರ ಮೇಲೆ ಕಾರಣ ತೋರಿಸಿ ಆಪಾದನೆ ಮಾಡಿ, ಅದನ್ನು ಸಾಬೀತು ಪಡಿಸಿಯೇ ವಿವಾಹ ವಿಚ್ಛೇದನೆ ಪಡೆಯಬೇಕು. ಸಾಬೀತು ಪಡಿಸಲು ವಿಫಲರಾದರೆ ಎಷ್ಟು ವರ್ಷ ಕಾಲ ಬೇರೆಯಾಗಿದ್ದರೂ ವಿಚ್ಛೇದನ ದೊರಕಲಾರದು ಎಂದರೆ ಬೇರೆ ವಿವಾಹ ಮಾಡಿಕೊಳ್ಳಲೂ ಸಾಧ್ಯವಿಲ್ಲ; ಕಳ್ಳತನದಿಂದ ವಿವಾಹವಾಗಿ ಇರುವುದನ್ನು ತಪ್ಪಿಸಲೂ ಸಾಧ್ಯವಿಲ್ಲ ಅಥವಾ ಬಲವಂತದಿಂದ ಗಂಡ-ಹೆಂಡತಿ ಒಟ್ಟಿಗೆ ವೈವಾಹಿಕ ಜೀವನ ನಡೆಸುವಂತೆಯೂ ಮಾಡಲು ಸಾಧ್ಯವಿಲ್ಲ. ಎಷ್ಟೋ ಬಾರಿ ತಾವು ಒಟ್ಟಿಗೆ ವೈವಾಹಿಕ ಜೀವನ ನಡೆಸಲು ಸಾಧ್ಯವಿಲ್ಲವೆಂದು ತಿಳಿದಾಗಲೂ ಹಟಕ್ಕೆ ಬಿದ್ದು ವಿಚ್ಛೇದನಕ್ಕೆ ಒಪ್ಪದೇ, ಕೇಸು ಹತ್ತಾರು ವರ್ಷ ಕಾಲ ನಡೆಯುವಂತೆ, ಕೇಸು ವಜಾ ಆಗುವಂತೆ ಮಾಡಿರುವ ಪ್ರಕರಣಗಳು ಬೇಕಾದಷ್ಟಿವೆ. ಇದೊಂದು ಮಾನವ ಸಂಬಂಧದ ಪ್ರಶ್ನೆಯಾಗಿದೆ.

ಸುಮಾರು 20 ವರ್ಷಗಳ ಹಿಂದೆ ಈ ರೀತಿ ವಿವಾಹ ಪೂರ್ಣವಾಗಿ ಮುರಿದುಬಿದ್ದ ಕಾರಣಕ್ಕಾಗಿ ವಿಚ್ಛೇದನ ಕೊಡಲು ಸಾಧ್ಯವಾಗುವಂತೆ ಕಾನೂನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಬಯಸಿತ್ತು. ಸಾರ್ವಜನಿಕರ ಅದರಲ್ಲೂ ಮಹಿಳಾ ಸಂಘ-ಸಂಸ್ಥೆಗಳ ಅಭಿಪ್ರಾಯ ತಿಳಿಯಲು ಆ ತಿದ್ದುಪಡಿಯನ್ನು ಎಲ್ಲೆಡೆ ಚರ್ಚೆಗಾಗಿ ಕಳಿಸಿತ್ತು. 3 ವರ್ಷಕಾಲ ಗಂಡ ಹೆಂಡತಿ ಬೇರೆಯಾಗಿದ್ದರೆ ಆ ಕಾರಣಕ್ಕಾಗಿಯೇ ವಿಚ್ಛೇದನ ನೀಡಲು ಈ ತಿದ್ದುಪಡಿ ಅವಕಾಶ ಕೊಡುತ್ತಿತ್ತು. ಆದರೆ, ಆಗ ಪುರುಷರು ವಿಚ್ಛೇದನಗೊಳ್ಳುವ ಪ್ರಕರಣಗಳು ಹೆಚ್ಚಿದ್ದು ಅದರಿಂದ ಮಹಿಳೆಯರಿಗೆ ಅನ್ಯಾಯವಾಗುತ್ತದೆ ಎನ್ನುವ ಭಾವನೆ ಉಂಟಾದುದರಿಂದ ನನ್ನನ್ನೂ ಒಳಗೊಂಡಂತೆ ಮಹಿಳಾವಾದಿಗಳು ಇದಕ್ಕೆ ಒಪ್ಪಿಗೆ ನೀಡಿರಲಿಲ್ಲ. ತಿದ್ದುಪಡಿ ಮಾಡುವುದೇ ಇದ್ದಲ್ಲಿ 3 ವರ್ಷಗಳ ಬದಲು 5 ವರ್ಷಗಳ ಬೇರ್ಪಡುವಿಕೆ ಬರಬೇಕೆಂದು ತಿದ್ದುಪಡಿ ಮಾಡಲು ಸೂಚಿಸಲಾಗಿತ್ತು. ಹಾಗಾಗಿ ಕೇಂದ್ರ ಸರ್ಕಾರ ಆ ರೀತಿಯ ತಿದ್ದುಪಡಿ ತರಲು ಅದು ಇನ್ನೂ ಸೂಕ್ತವಾದ ಕಾಲವಲ್ಲವೆಂದು ವಿಷಯವನ್ನು ಮುಂದೆ ಹಾಕಿತ್ತು. ಈಗ ಪುನಃ ಈ ಪ್ರಶ್ನೆ ಎದ್ದಿದೆ. ಈಗ ನ್ಯಾಯಾಲಯಗಳ ಮುಂದೆ ಮಹಿಳೆಯರೂ ಪುರುಷರೊಂದಿಗೆ ಸಮಸಂಖ್ಯೆಯಲ್ಲಿ ವಿಚ್ಛೇದನ ಕೇಳುತ್ತಿದ್ದಾರೆ. ಅನುಕೂಲ-ಅನಾನುಕೂಲತೆಗಳು ಪುರುಷ-ಮಹಿಳೆಯರಿಗೆ ಸರಿಸಮನಾಗಿದೆ. ಹಾಗಾಗಿ ಈ ತಿದ್ದುಪಡಿ ತರಲು ಇದು ಸೂಕ್ತ ಕಾಲವೆಂದು ಅನ್ನಿಸುತ್ತದೆ. ಒಟ್ಟಾರೆಯಾಗಿ ಸಮಾಜ ಚಲನಶೀಲವಾಗಿದ್ದು ಮಹಿಳೆಯರ ಸ್ಥಿತಿಗತಿ ಸುಧಾರಿಸಲು ನ್ಯಾಯಾಲಯಗಳೂ ಸಂವೇದನಾಶೀಲತೆಯನ್ನು ತೋರಿಸುತ್ತಿರುವುದು ಆಶಾಭಾವನೆಯನ್ನುಂಟುಮಾಡುತ್ತದೆ.

ನಭಕ್ಕೆ ಕೈಚಾಚಿದ ಸುನೀತಾ...

ಸಾಧನೆಯ ತುತ್ತ ತುದಿಯೇರಿದ ಕಲ್ಪನಾ ಚಾವಲಾ ಅವರ ದುರಂತದ ಸಾವು ಅತ್ಯಂತ ನೋವಿನ ಸಂಗತಿಯಾಗಿತ್ತು. ನೂರು ಕಲ್ಪನಾರನ್ನು ಮಟಿಸುವ ತಾಕತ್ತು ಕಲ್ಪನಾರ ಸ್ಮರಣೆಗಿದೆ. ಕೊಲಂಬಿಯಾದಲ್ಲಿ ಕಲ್ಪನಾ ಸ್ಫೋಟಿಸಿ ಕೇವಲ ಮೂರು ವರ್ಷ, ಮತ್ತೊಬ್ಬ ಭಾರತೀಯ ಮೂಲದ ಮಹಿಳೆ ದಿಟ್ಟವಾಗಿ ನಭದ ಹಾದಿ ಹಿಡಿದಿದ್ದಾಳೆ. ಅಂತರಿಕ್ಷ ಯಾನದ ಸವಾಲುಗಳನ್ನು ಸಾಹಸದಿಂದ ಎದುರು ನೋಡುತ್ತಿದ್ದಾಳೆ. ಸೌಂದರ್ಯ ರಾಣಿಯರು, ರೂಪದರ್ಶಿಯರೇ ರಾರಾಜಿಸುವ ಇಂದಿನ ಸಾಮಾಜಿಕ ಸಂದರ್ಭದಲ್ಲಿ, ದಿಟವಾದ ಸ್ಫೂರ್ತಿಯಾಗಿ, ದಿಟ್ಟವಾದ ಮಾದರಿಯಾಗಿ ಸುನೀತಾ ವಿಲಿಯಮ್ಸ್ ಎದ್ದು ನಿಂತಿದ್ದಾರೆ.

ಅಮೆರಿಕದ 'ನಾಸಾ' 37 ವರ್ಷದ ಸುನೀತಾ ವಿಲಿಯಮ್ಸ್ ಅವರನ್ನು 'ಇಂಟರ್ ನ್ಯಾಷನಲ್ ಸ್ಪೇಸ್ ಸ್ಟೇಷನ್ ಎಕ್ಸ್‌ಪೆಡಿಷನ್ 10'ರ ಅಂತರಿಕ್ಷ ಯಾನಕ್ಕೆ ಆಯ್ಕೆ ಮಾಡಿದೆ. ಬಾಲ್ಯದಿಂದಲೇ ಮಿಂಚಿದ ಈ ಚುರುಕು ಹುಡುಗಿ, ಕಲ್ಪನಾ ಅವರ ಒಳ್ಳೆಯ ಗೆಳತಿ. ಈಕೆ ಹೆಲಿಕಾಪ್ಟರ್ ಚಾಲಕಿ. ಪರೀಕ್ಷಣಾ ಹಾರಾಟಗಳನ್ನು ನಡೆಸಿದಾಕೆ. 30 ವಿವಿಧ ವಿಮಾನಗಳಲ್ಲಿ 2770 ಗಂಟೆಗಳ ಹಾರಾಟದ ಅನುಭವವಿರುವ ಸುನೀತಾ, ವಿಮಾನ ಚಾಲನೆಯ ತರಪೇತು ನೀಡಿದಾಕೆ. ಈಕೆ ರಷಿಯಾದ 'ಸ್ಪೇಸ್ ಏಜೆನ್ಸಿ'ಯಲ್ಲಿಯೂ ದುಡಿದವರು. ಮೈಖೇಲ್ ವಿಲಿಯಮ್ಸ್ ಅವರನ್ನು ಮದುವೆಯಾಗಿರುವ ಭಾರತದ ಮೂಲದ ಈ ಹೆಣ್ಣು ಮಗಳು ಭಾರತದ ಬಾಲಕಿಯರಿಗೆ ಮಾದರಿಯಾಗಲಿ. ಅಂತರಿಕ್ಷಕ್ಕೆ ಹಾರಿ, ಸುರಕ್ಷಿತವಾಗಿ ಭೂಮಿಯನ್ನು ಸ್ಪರ್ಶಿಸುವ ಅವಕಾಶ ಇವರದಾಗಲಿ.

ಮನಸಾರೆ ನಕ್ಕಿದ್ದಳು. ಆಗೆಲ್ಲ ಬೇಡ ಬೇಡವೆಂದರೂ ತನ್ನ ಬಾಲ್ಯ, ತನ್ನ ತಂದೆಯೊಂದಿಗಿನ ಒಡನಾಟ ಜರೀನಾಳ ನೆನಪಿಗೆ ಬರುತ್ತಿತ್ತು. "ಹೌದಲ್ಲ, ತನ್ನಪ್ಪ ತನ್ನನ್ನೂ ಹೀಗೆ ಮುದ್ದಾಡಿರಬಹುದೇ? ಯಾವಾಗ ಅಪ್ಪ ತನ್ನನ್ನು ಕೊನೆಯ ಬಾರಿ ಮುದ್ದಿಸಿದ್ದು? ಊಹೂಂ, ಕೊನೆಯ ಬಾರಿಯಲ್ಲ. ಒಂದೇ ಒಂದು ಸಲ ತನ್ನನ್ನು ತಬ್ಬಿ ತನ್ನಪ್ಪ ಮುದ್ದಿಸಿದ್ದು ಇದೆಯೇ ಎಂದು ಜರೀನಾ ಯೋಚಿಸ ತೊಡಗಿದಳು.

"ಆಗ ನೀನು ಚಿಕ್ಕ ಹುಡುಗಿ ಇನ್ನೂ ತೊಟ್ಲಾಗೆ ಮಲ್ಕೋತಿದ್ದಿ. ಹಳೇ ಮನಿ. ಅದೂ ಸಗ್ಣೀದು, ಹಿಂಗಾಗಿ ಅಲ್ಲೇ ಕತ್ಲು ಅಂತಂದ್ರ ಚೋಳಿನ್ ಕಾಟ ಭಾಳ. ಎಷ್ಟ್ ಜ್ವಾಕಿ ಮಾಡಿದ್ರೂ ಎಲ್ಲಿಂದ್ಲೋ ಒಂದ್ ಚೋಳು ಬಂದು ನಿನ್ ತೊಡೀಗೆ ಕಡ್ದಿತ್ತು. ಅವತ್ತ್ ನೋಡವ್ವ, ನಿಮ್ಮಪ್ಪ ನಿನ್ ತೂಗಿದ್ರೂ ತೂಗಿದ್ರೂ.. ಕೇಳ್ಬ್ಯಾಡ ಆ ಸುದ್ದಿ."

"ಮತ್ತೆ ಏನಾತಮ್ಮ"

"ಇಡೀ ರಾತ್ರಿ ಕಣ್ಣಾಗ ಕಣ್ಣಿಟ್ಟು ನಿನ್ನ ಕಾದಿದ್ದಾತು. ನಿನ್ ತೂಗ್ತಾ ನಿಮ್ಮಪ್ಪ 'ಫಣಿಪ್ಪ ಶರ್ಮಾ' ಅಂದ್ರ ನೀನು 'ಫಮ್ಮಮ್ಮ' ಅನ್ನೋಳು. ಅವ್ರು 'ಮಚಿಟೀ ಶರ್ಮಾ' ಅಂದ್ರ 'ಮ್ಮ ಮ್ಮ ಮ್ಮ' ಅಂತ ಆ ನೋವ್ನಾಗೂ ನೀನು ದನಿ ಕೊಡೋಳು. ಅಲ್ಲೇ ಸೇರಿದ್ ಮಂದಿಗೆ ಇದ ದೊಡ್ ಬೆರಗು ಆಗಿತ್ತು ನೋಡು."

ಇದು ಅಮ್ಮ ಎಂದೋ ಹೇಳಿದ್ದ ಕಥೆ. ಆಗ ತಾನು ಎರಡೋ ಮೂರೋ ವರ್ಷದವಳು. ಆ ಘಟನೆ ಹೇಗೆ ನೆನಪಿರಲು ಸಾಧ್ಯ? ಜರೀನಾ ಅನಂತರದ ತನ್ನ ಮತ್ತು ತನ್ನ ತಂದೆಯ ಸಂಬಂಧವನ್ನು ಮೆಲುಕಾಡತೊಡಗಿದಳು. ಆತನ ಸ್ಪರ್ಶದ ನೆನಪಿಗಾಗಿ, ಆತನ ಮಾರ್ದವ ಮಾತುಗಳ ಸಂದರ್ಭಕ್ಕಾಗಿ, ಬೆಚ್ಚನೆಯ ಸ್ಮೃತಿಗಾಗಿ ಛಲ ಬಿಡದೆ ತನ್ನ ನೆನಪಿನ ಉಗ್ರಾಣಕ್ಕೆ ಕೈ ಹಾಕಿ ಒಂದೊಂದೇ ತುಣುಕುಗಳನ್ನು ಹೆಕ್ಕಿ ಜೋಡಿಸತೊಡಗಿದಳು.

ಅಂದು ಆಟದ ಸಂಭ್ರಮದಲ್ಲಿ ಸೂರ್ಯ ಮುಳುಗಿದ್ದೇ ತನ್ನ ಗಮನಕ್ಕೆ ಬಂದಿರಲಿಲ್ಲ. ಅರಿವಿಗೆ ಬರುತ್ತಿದ್ದಂತೆ ಅಲ್ಲಿಯವರಿಗಿನ ನಗು, ಕೇಕೆ ಎಲ್ಲವೂ ಜರ್ರನೆ ಇಳಿದು ತನ್ನ ಪಾದವನ್ನು ಸೇರಿತ್ತು. ಮನಸ್ಸು ವೇಗವಾಗಿ ಓಡಿ ಮನೆ ತಲುಪಿದರೂ ತನ್ನ ಕಾಲುಗಳು ಮನದ ವೇಗಕ್ಕೆ ಓಡಲಾಗದೆ ಸೋತುಹೋಗಿದ್ದವು. ಒಣಗಿದ ಬಾಯಿ, ಗಂಟಲು, ತುಂಬಿದ ಕಣ್ಣು, ಡವಗುಟ್ಟುವ ಎದೆ ಹೊತ್ತು ಸದ್ದಾಗದಂತೆ ಗೇಟನ ಕದ ತೆರೆಯುವಾಗ ಸುತ್ತಲೂ ಕಪ್ಪು ಆವರಿಸಿತ್ತು. ತೆರೆದೇ ಇದ್ದ ಮುಂಬಾಗಿಲನ್ನು ಕಂಡರೂ ಕಳ್ಳ ಹೆಜ್ಜೆ ಹಾಕುತ್ತಾ ಹಿಂದಿನ ಬಾಗಿಲತ್ತ ಓಡಿದ ನೆನಪು ಅವಳ ತುಟಿಗಳ ಮೇಲೆ ವಿಷಾದದ ನಗುವನ್ನು ತರಿಸಿತು. ಹೀಗೆ ಅಪ್ಪನಿಗೆ ಹೆದರಿ ಹಿಂಬಾಗಿಲಿನ ಮೊರೆ ಹೋಗುತ್ತಿದ್ದುದು ಅದು ಮೊದಲನೆಯದೂ ಆಗಿರಲಿಲ್ಲ, ಕೊನೆಯದೂ ಆಗಿರಲಿಲ್ಲ. ಅಪ್ಪನ ಶಿಕ್ಷೆಯ ವಿಧಾನವೇ ಅಂಥದ್ದು. ನಿಯಮವನ್ನು ಮುರಿದವರೊಂದಿಗೆ ಯಾರೂ ಮಾತಾಡುವಂತಿರಲಿಲ್ಲ. ತುಂಬಿದ ಮನೆಯಲ್ಲಿ ಮಾತಿಲ್ಲದೆ, ಮಾತಾಡದೆ ಕೇವಲ ಅಪರಿಚಿತರಂತೆ, ನೆರಳುಗಳಂತೆ, ಹಾದುಹೋಗುವ ಪಾತ್ರಗಳೊಂದಿಗೆ ಬದುಕುವ ನೋವು ಅನುಭವಿಸಿದವರಿಗೇ ಅರ್ಥವಾಗುತ್ತದೆ. ನಾಯಿಗೆ ಊಟ ಹಾಕಿದಂತೆ ತಟ್ಟೆಗೆ ಎಲ್ಲ ಸುರಿದು ಮುಂದಿಟ್ಟರೆ, ತಪ್ಪಿತಸ್ಥರು ಉಸಿರೆತ್ತದ ಉಂಡು ಮುಗಿಸಬೇಕು. ಆ ಬಳಿಕ ವಧಾಸ್ಥಾನಕ್ಕೆ ಹೋಗುವ ಖೈದಿಯಂತೆ ಹಾಸಿಗೆಗೋ ವಿಚಾರಣೆಗೋ ತೆರಳಬೇಕು. ಶಾಲೆಯಿಂದ ಬರುವುದು ತಡವಾದರೆ, ಹೇಳಿದ್ದ ಪಾಠವನ್ನು ಸರಿಯಾಗಿ ಒಪ್ಪಿಸದಿದ್ದರೆ, ವಹಿಸಿದ ಕೆಲಸವನ್ನು ಪೂರ್ಣ ಮುಗಿಸದಿದ್ದರೆ... ಪ್ರತಿಯೊಂದಕ್ಕೂ ಒಬ್ಬರಲ್ಲ ಒಬ್ಬರಿಗೆ ಆ ಮನೆಯಲ್ಲಿ ಇಂತಹ ವಿಚಾರಣೆಗಳು ಸಾಮಾನ್ಯವಾಗಿತ್ತು.

ಅಪ್ಪ ತನ್ನನ್ನು ಕೊನೆಯ ಬಾರಿ ಮುಟ್ಟಿದ್ದು ಯಾವಾಗ ಇದ್ದಿರಬಹುದು? ಒಮ್ಮೆ ಊರಿಗೆ ಹೊರಟಿದ್ದಾಗ ಹೊರಟ ಬಸ್ಸಿಗೆ ತೂರಿಕೊಳ್ಳುವ ಸಂದರ್ಭದಲ್ಲಿ ಆತ ತನ್ನ ಕೈಹಿಡಿದು ಬಸ್ಸಿಗೆ ಹತ್ತಿಸಿದ್ದ ನೆನಪು. ಆಗ ಆ ಸ್ಪರ್ಶ, ಆ ರೋಮಭರಿತ ಕೈ, ಅದರ ಬಿಸುಪು, ಅದರ ಬಿಗಿ ಒಂದು ಕ್ಷಣ ತನ್ನಲ್ಲಿ ಏನೋ ಸಣ್ಣ ಸಂಚಲನೆಯನ್ನೇ ಉಂಟುಮಾಡಿತ್ತು. ಅಪ್ಪನ ಸ್ಪರ್ಶದಲ್ಲಿ ಇದ್ದುದು ಪ್ರೀತಿಯೋ ಕರ್ತವ್ಯವೋ? ಅಥವಾ ಅದು ಕೇವಲ ಯಾಂತ್ರಿಕ ಕ್ರಿಯೆಯೋ ಎಂಬುದನ್ನು ಇಂದು ಅರ್ಥೈಸುವುದು ಕಷ್ಟ. ಅಪ್ಪ ಅಂದರೆ ಕಾನೂನು, ಅಪ್ಪ ಅಂದರೆ ಶಿಕ್ಷೆ, ಅಪ್ಪ ಅಂದರೆ ಭಯ, ಅಪ್ಪ ಅಂದರೆ ನಿಗೂಢ ಭವಿಷ್ಯ. ಯಾವುದಕ್ಕೆ ರೇಗುತ್ತಾನೆ, ಯಾವುದಕ್ಕೆ ಹರ್ಷಿಸುತ್ತಾನೆ, ಯಾವುದಕ್ಕೆ ಅಭಿಮಾನಪಡುತ್ತಾನೆ ಎಂದು ಅರ್ಥೈಸಿಕೊಳ್ಳುವುದು ತನಗೆ ಕಷ್ಟವಾಗಿತ್ತು. ಅರ್ಥವಾಗುವ ವೇಳೆಗೆ ಅಪ್ಪನನ್ನು ಮೆಚ್ಚಿಸುವ ಉತ್ಸಾಹ ಅವಳಲ್ಲಿ ಉಳಿದಿರಲಿಲ್ಲ.

ಇಂತಹ ಅಪ್ಪ ಕಳಕೊಂಡದ್ದು ಹೆಚ್ಚೋ ಅಥವಾ ತನ್ನಿಂದ ಕಸಿದುಕೊಂಡದ್ದು ಹೆಚ್ಚೋ ಎಂಬ ಪ್ರಶ್ನೆ ಜರೀನಾಳ ಮುಂದೆ ಧುತ್ತೆಂದು ಎದುರಾಯಿತು. ಅಪ್ಪ ಮತ್ತು ಅಪ್ಪನಿಂದ ದೊರೆವ ಪ್ರೀತಿ ಏನು ಎಂಬುದನ್ನು ಮಗಳು ಮತ್ತು ಸದಾನಂದರ ಒಡನಾಟವು ಅವಳಿಗೆ ತಿಳಿಸಿತ್ತು. ಅದರ ಬೆಲೆ ಕಟ್ಟಲಾಗದ ಮೌಲ್ಯವನ್ನು ತನ್ನ ಮಗಳು ಅರಿತುಕೊಂಡಾಳೇ ಎಂಬ ಅಳುಕೂ ಜರೀನಾಳನ್ನು ಆಗಾಗ ಕಾಡುತ್ತಿತ್ತು.

ಅಂಥ ತೀವ್ರವಾದ ಸಂವೇದನೆಯ ಸಂದರ್ಭದಲ್ಲಿ ಆಕೆಗೆ ಸದಾನಂದನ ಬಾಲ್ಯದ ಕುರಿತು ಇನ್ನಿಲ್ಲದ ಕುತೂಹಲ ಹುಟ್ಟಿತು. ಇಷ್ಟೊಂದು ಪ್ರೀತಿಸುವ, ತಂದೆತನದ ಸುಖ ಕಾಣುವ ಸದಾನಂದನ ಬಾಲ್ಯ ತುಂಬ ಮಾರ್ದವವಾದದ್ದು, ಸುಖಕರವಾದದ್ದು ಆಗಿದ್ದಿರಬೇಕು ಎಂಬ ತೀರ್ಮಾನ ಅವಳದ್ದು. ಅಂತೆಯೇ ಕುತೂಹಲದಿಂದ ಆತನ ಬಾಲ್ಯವನ್ನು ಕೆದಕಲು ಹೋದಾಗಲೆಲ್ಲಾ ಅವಳ

ಪ್ರಶ್ನೆಗೆ ಆತನಿಂದ ಸಿಕ್ಕಿದ್ದು ಒಂದು ನಗು ಮಾತ್ರ! ಮತ್ತೆ ಮತ್ತೆ ಒತ್ತಾಯಿಸಿದಾಗ, ನಿಧಾನಕ್ಕೆ ತನ್ನ ಬಾಲ್ಯವನ್ನು ಅವಳ ಮುಂದೆ ಹರವಿ ಇಟ್ಟಿದ್ದ. ಒಂದಷ್ಟು ಊಹೆಗಳು, ಕೆಲವಷ್ಟು ಕಲ್ಪನೆಗಳು ಮತ್ತು ಪೂರ್ವ ತೀರ್ಮಾನಗಳಿಂದ ಅವನ ಬಾಲ್ಯ ಜಗತ್ತಿನ ಒಳಹೊಕ್ಕ ಜರೀನಾಗೆ ಕಂಡದ್ದು ತನ್ನದೇ ಬಾಲ್ಯದ ಭಿನ್ನರೂಪ. ಆದರೆ ಅಂದಿನ ಕಹಿ ಅವನ ಮನಸ್ಸನ್ನು ಕಹಿಯಾಗಿಸಿಲ್ಲ! ಅದೇ ಅಪ್ಪನನ್ನು ಎದುರು ಕೂರಿಸಿ, ಆತ ನೀಡಿದ ಶಿಕ್ಷೆಯನ್ನು, ತಾನು ಮಾಡಿದ ತುಂಟಾಟವನ್ನು, ಕದ್ದು ಊರು ಬಿಟ್ಟು ಓಡಿದ್ದನ್ನು, ತನಗಾಗಿ ಹುಡುಕಾಡಿದ್ದನ್ನು, ಹೀಗೆಯೇ ಒಂದೊಂದನ್ನೂ ರಸವತ್ತಾಗಿ ಹೇಳಿ ತಾನೂ ನಕ್ಕು ಅಪ್ಪನನ್ನೂ ನಗಿಸಿ, ಕಣ್ಣು ಮಿಟುಕಿಸುತ್ತಿದ್ದುದು ಜರೀನಾಗೆ ಅಚ್ಚರಿಯೋ ಅಚ್ಚರಿ.

– 2 –

ಉಣ್ಣಲು ಹೊಸಕಾಡುತ್ತಿದ್ದ ಮಗಳಿಗೆ ಜರೀನಾ ಕೈತುತ್ತು ಹಾಕುತ್ತಾ ಕುಳಿತಿದ್ದಳು. ಒಂದೊಂದು ತುತ್ತಿಗೂ ಅಪ್ಪನಿಂದ ಒಂದೊಂದು ಮುತ್ತು. ಇದು ಪುಟ್ಟಿಯ ದಿನ ದಿನದ ವರ್ತಮಾನ. "ಏನೇ ಪುಟ್ಟಿ, ಇಷ್ಟು ದೊಡ್ಡೋಳಾದ್ರೂ ಅಪ್ಪನ ತೊಡೆ ಏರಿ ಕೂತಿದ್ದೀಯಾ? ಛೀ ಛೀ ಛೀ... ತುತ್ತಿಗೊಂದು ಮುತ್ತು ಬೇರೆ ಬೇಕಾ? ನೀನೇ ಯಾವಾಗ ಉಣ್ಣೋದನ್ನ ಕಲೀತೀಯಾ? ನಾನು ಏನು ಹೇಳಿದ್ದೆ ನಿಂಗೆ? ಇನ್ ಮೇಲೆ ಸ್ನಾನಕ್ಕೆ ಹೋದ್ರೆ ಅಪ್ಪಾನೇ ಬೇಕೂಂತ ಅಂದ್ಯೋ..." ಅಜ್ಜಿ ಪುಟ್ಟಿಯನ್ನು ರೇಗಿಸಿದರು. ಅಜ್ಜಿಯ ಮಾತು ಪೂರ್ಣವಾಗುವ ಮೊದಲೇ 'ಓ' ಎಂದು ಪುಟ್ಟಿ ಅಳತೊಡಗಿದಳು. "ಪುಟ್ಟಾ, ಅಜ್ಜಿ ತಮಾಷೆಗೆ ಹೇಳಿದ್ದು" ಎಂದು ಎಷ್ಟೇ ತಿಳಿ ಹೇಳಲು ಪ್ರಯತ್ನಿಸಿದರೂ, ಆಕೆ ಮತ್ತೆ ಅಪ್ಪನ ತೊಡೆ ಏರುವ ಸಾಹಸವನ್ನು ಮಾಡಲಿಲ್ಲ. ಮೊದಲೇ ಹೊಗೆ ಸುತ್ತಿದ್ದ ವಾತಾವರಣಕ್ಕೆ ಈಗ ಸ್ಪಷ್ಟರೂಪ ಬರತೊಡಗಿತ್ತು. ಸದಾನಂದ ಏನೂ ಮಾತನಾಡದೆ ಅಲ್ಲಿಂದ ಎದ್ದು ಹೋದ. "ನಿನಗೇನಾದರೂ ಅರ್ಥ ಆಗ್ಬೇಕು. ಹೆಣ್ಣು ಮಕ್ಕಳ್ನ ಹೀಗೆಲ್ಲ ಬೆಳೆಸ್ಬಾರ್ದು. ಅಪ್ಪ ಆದ್ರೂ ಮಗಳು ಬೆಳೀತಿದ್ದಾಳೆ ಅಂತ ನೀನು ಮರೀಬಾರ್ದು"... ಇನ್ನೂ ಏನೋ ಹೇಳಹೊರಟಿದ್ದ ಅತ್ತೆಯನ್ನು ಜರೀನಾ ತಡೆದಳು. ಅಸಹನೆ ಅವರ ಮುಖದಲ್ಲಿ ಒಡೆದು ಕಂಡರೂ, ಆಕೆಗೆ ಬೇರೆ ದಾರಿ ಇರಲಿಲ್ಲ. 'ತಮ್ಮ ಬದುಕಿನ ದಾರಿ ಬೇರೆ. ಅಲ್ಲಿ ಸಂಬಂಧದ ಸ್ವರೂಪ ಬೇರೆ. ತಮ್ಮ ಭೂತದ ಕರಿನೆರಳು ಮಗಳ ಬದುಕಿನಲ್ಲಿ ಕಾಡೋದು ಬೇಡ..." ಹೀಗೆ ಅತ್ತೆಗೆ ಹೇಳುವುದಕ್ಕೆ ಎಷ್ಟೋ ಮಾತುಗಳಿದ್ದವು. ಆದರೆ ಅವುಗಳಿಗೆಲ್ಲ ಅತ್ತೆಯ ಎದುರು ಧ್ವನಿರೂಪ ಬರಲಿಲ್ಲ.

ರಾತ್ರಿ ಮಲಗುವಾಗ "ಇತ್ತೀಚೆಗೆ ಪುಟ್ಟೀ ನಡೆವಳಿಕೇನ ಗಮನಿಸಿದ್ದೀಯಾ?" ಎಂದ ಸದಾನಂದ. ಅವನ ಪ್ರಶ್ನೆಯ ಹಿಂದಿನ ಉದ್ದೇಶವನ್ನು ಅರಿತುದರಿಂದ ಜರೀನಾ ಏನೂ ಹೇಳದೆ, ಕೇವಲ ಅವನ ಮುಂಗೈಯನ್ನು ಅಮುಕಿ ಸಮಾಧಾನಿಸಲು ಯತ್ನಿಸಿದಳು. "ನನಗ್ಯಾಕೋ ಭಯ ಆಗ್ತಿದೆ. ಪುಟ್ಟಿ ಮೊದ್ಲಿನಂತೆ ಇಲ್ಲ. ಅವಳ್ನ ನಾನು ಕಳ್ಕೊಳ್ತೀನೇನೋ ಅನ್ನೊ ಭಯ ಹುಟ್ತಾ ಇದೆ. ಇತ್ತೀಚೆಗೆ ನನ್ನ ತೊಡೆ ಮೇಲೆ ಅವಳು ಕೂತಿದ್ರೂ ಮುಳ್ಳಿನ ಮೇಲೆ ಕೂತ್ಹಂಗೆ ಇರ್ತಾಳೆ. ನೀನ್ ಗಮ್ನಿಸ್ತಿದ್ದೀಯಾ? ನಾನು ಮುದ್ದ್ ಮಾಡಿದ್ರೆ ತಕ್ಷಣ ಕೆನ್ನೆ ಒರೆಸ್ಕೊಳ್ತಾಳೆ. ಅಷ್ಟೇ ಯಾಕೆ? ಯಾವತ್ತೂ ರಾತ್ರಿ ನಿದ್ದೆ ಮಾಡುವಾಗ ಅವಳ್ನ ನಾನೇ ಮಲಗಿಸ್‌ಬೇಕಿತ್ತು. ನೀನ್ ಎಷ್ಟ್ ಕರೆದ್ರೂ ಬರ್‍ತಿರ್ಲಿಲ್ಲ! ಅಂಥವ್ಳು ಈಗೀಗ..."

"ಸದಾ, ನೀನ್ ಹೇಳೋದೂ ನಿಜ. ಇತ್ತೀಚೆಗೆ ಅವಳ ರೂಢಿಗಳು ಸ್ವಲ್ಪ ಬದಲಾಗ್ತಾ ಬಂದಿವೆ. ನನ್ನೇ ಅಂಟ್ಕೊಂಡು ಮಲಗ್ತಿರ್ತಾಳೆ. ಅದನ್ನ ನೋಡಿ ನಾನೇನೋ ಖುಷಿ ಪಟ್ಟೆ. ನೀನು ಅವಳ ಮುಖ ಸವರಿದ್ರೆ, ರಾತ್ರಿ ಎಂಥ ನಿದ್ದೆಗಣ್ಣಲ್ಲೂ ಸ್ಪರ್ಶದಲ್ಲೇ ಕೈ ನಿನ್ದು ಅಂತ ಗುರ್ತಿಸಿ, ಅವ್ಳು ನಿನ್ ಕೈನ ದೂಡ್ತಾ ಇದ್ದಾಗ, ನಾವು ನಕ್ಕು ಸುಮ್ನಾಗಿ ಸ್ವಲ್ಪ ಉದಾಸೀನ ಮಾಡಿದ್ವಾ ಅಂತ ನಂಗೂ ಈಗ ಅನ್ಸುತ್ತೆ. ಅದರ ಹಿಂದಿನ ಕಾರಣ ಹುಡುಕ್ದೆ ತಪ್ಪು ಮಾಡಿದ್ವಾ ಅಂತ..."

"ನಾವ್ ಅಂದ್ಕೊಳ್ಳೋದೇ ಒಂದು, ಅದು ಆಗೋದೇ ಒಂದು, ನಮ್ ಮಗ್ಳು ಇಷ್ಟ್ ಬೇಗ ಬೆಳೆದುಬಿಟ್ಲಾ? ಇನ್ನು ಯಾವತ್ತೂ ಅವಳ ಸ್ಪರ್ಶ ನನಗೆ ಸಿಗೋದಿಲ್ವಾ? ಈ ಅಂತರಾನ ನಾನು ಹ್ಯಾಗೆ ಸಹಿಸ್ಲಿ? ನನಗ್ಯಾಕೋ ಎಲ್ಲಾ ಖಾಲಿ ಖಾಲಿ ಅನ್ನಿಸ್ತಾ ಇದೆ. ಈಗಲೇ ಇವಳು ಹೀಗಾದ್ರೆ ಇನ್ನು ಮುಂದಿನ ದಿನಗಳನ್ನ ನನಗೆ ಕಲ್ಪಿಸಿಕೊಳ್ಳೋಕೂ ಆಗೂದಿಲ್ವಲ್ಲಾ..." ಎನ್ನುತ್ತ ಸದಾನಂದ ಅಕ್ಷರಶಃ ಗದ್ಗದಿತನಾದ.

"ಏ... ಯಾಕೆ ಇಲ್ಲದ್ದೆಲ್ಲಾ ಯೋಚಿಸಿ, ನೆಮ್ದಿ ಹಾಳು ಮಾಡ್ಕೋತೀಯಾ? ಹಾಗೇನೂ ಆಗೂದಿಲ್ಲ. ಅಜ್ಜಿ ಇರುವಾಗ ಅವ್ರ ಮಾತ್ಗೆ ಹಾಗೆಲ್ಲಾ ಮಾಡಿರ್‌ಬಹ್ದು. ಎಲ್ಲ ಸರಿಹೋಗುತ್ತೆ ಸುಮ್ನಿರು" ಆದರೆ ಜರೀನಾ ಅವಳ ಮಾತಿನ ಮೇಲೆ ಅವಳಿಗೇ ಭರವಸೆ ಇದ್ದಂತಿರಲಿಲ್ಲ.

"ಅಮ್ಮನ ಮಾತಿಗೆ ಅಂತಲ್ಲ. ನಾನೊಬ್ಬ ಗಂಡಸು. ಆದಷ್ಟೂ ತಾನು ನನ್ನಿಂದ ದೂರ ಇರ್ಬೇಕು ಅನ್ನೊ ಸೂಕ್ಷ್ಮ ಎಚ್ಚರ ಅವ್ಳಿಗೆ ಬಂದ್‌ಬಿಟ್ಟಿದೆ. ಇದರಲ್ಲಿ ಅಮ್ಮ, ಅವಳ ಟೀಚರು, ಫ್ರೆಂಡ್ಸ್ ಯಾರ್‍ಯಾರ ಪಾತ್ರ ಎಷ್ಟೆಷ್ಟು ಅಂತ ಹೇಳೋಕ್ ಸಾಧ್ಯಾನಾ? ನಿಜ ಅಂದ್ರೆ ಅವಳ್ನ ಬಿಟ್ರೆ ನನ್ನ ಜೀವನ್ದಲ್ಲಿ ಪ್ರೀತಿಸೋಕೆ ಬೇರೇನೂ ಇಲ್ವಲ್ಲ. ಇದನ್ನ ಅವಳ್ಗೆ ಹೇಗೆ ಅರ್ಥ ಮಾಡಿಸ್ಲಿ? ಅವ್ಳ ಈ ದೂರಾನ ಹೇಗೆ ಸಹಿಸ್ಲಿ?" ಎಂದು ಕುಸಿದು ಕುಳಿತ ಸದಾನಂದ.

– ಡಾ|| ಸಬೀಹಾ

ಸಖಿಯೊಡನೆ ಕೆಲವು ಕ್ಷಣ...

ನೇಮಿಚಂದ್ರ

ಮಹಿಳಾ ಸಂಘಟಕರಾಗಿ ಸಕ್ರಿಯವಾಗಿ ದುಡಿಯುತ್ತಿರುವ ವಾಣಿ ಪರಿಯೋಡಿ ಅವರ ಪುಟ್ಟ ಪುಸ್ತಕ 'ಸಖೀ-ಸಹಗಮನ', ಹಳ್ಳಿಗಾಡಿನ ಹೆಣ್ಣು ಮಕ್ಕಳ ಬದುಕಿನ ಸಣ್ಣ ಸಣ್ಣ ಮಗ್ಗಲುಗಳನ್ನು ತೆರೆದಿಡುತ್ತಲೇ, ಮಹಿಳಾ ಜಾಗೃತಿಯ ಸ್ಪಷ್ಟ ನಿದರ್ಶನಗಳನ್ನು ಹೊರಹಾಕುತ್ತದೆ.

ಮಹಿಳಾ ಸಂಘಟನೆ ಮತ್ತು ಸಮಾಜಸೇವೆಯ ದಟ್ಟ ಅನುಭವದ ಹಿನ್ನೆಲೆಯಲ್ಲಿ ವಾಣಿ ಪರಿಯೋಡಿ ಅವರು ಪುಟ್ಟ ಪುಟ್ಟ ಘಟನೆಗಳನ್ನು ಸಂಕಲಿಸಿ ಹೊರತಂದಿರುವ ಪುಸ್ತಕ 'ಸಖೀ-ಸಹಗಮನ' ಅವರೇ ಹೇಳುವಂತೆ 'ಇಲ್ಲಿಯ ಸಖೀ ನಿರ್ದಿಷ್ಟ ವ್ಯಕ್ತಿಯಲ್ಲ, ಹಾಗೆಂದು ಆಕೆ ಕಲ್ಪನೆಯ ಕೂಸೂ ಅಲ್ಲ 'ಸಖೀ' ಸಾಮಾನ್ಯ ಹೆಣ್ಣನ್ನು ಪ್ರತಿನಿಧಿಸುತ್ತಲೇ, ಹೆಣ್ಣಿನ ಅಸಾಮಾನ್ಯ ಶಕ್ತಿಯ ಸಂಕೇತವಾಗುತ್ತಾಳೆ. ಸಮಾಜಸೇವೆಯ ಸಂದರ್ಭದ ಆಪ್ತ ಕ್ಷಣ ಗಳನ್ನು ವಾಣಿ ಅವರು ಇಲ್ಲಿ ಹಂಚಿಕೊಂಡಿದ್ದಾರೆ. ಸಖಿಯಲ್ಲಿ ಬಹಳಷ್ಟು ಬಾರಿ ನಮ್ಮ ಪ್ರತಿಬಿಂಬವನ್ನು ಕಾಣುತ್ತೇವೆ. ಹಾಗೆಂದೇ ಸಖೀ ನಮಗೂ ಆಪ್ತವಾಗುತ್ತಾಳೆ.

ಪುರುಷರ ಅನೇಕ ವಿತಂಡ ವಾದಗಳನ್ನು, ಅತಿ ಸರಳವಾಗಿ ಹೆಚ್ಚು ಮಾತಿಲ್ಲದೆ ಸಖಿ ಎದುರಿಸುವ ಬಗೆ ಅದ್ಭುತವಾಗಿದೆ.

'ವೇಶ್ಯಾವೃತ್ತಿ ಇಲ್ಲದೇ ಹೋಗಿದ್ದರೆ, ಲೆಕ್ಕವಿಲ್ಲದಷ್ಟು ರೇಪ್‌ಗಳು ನಡೆಯುತ್ತಿದ್ದವು. ವೇಶ್ಯಾವೃತ್ತಿ ಇರುವುದರಿಂದ ನಮ್ಮ ಹೆಣ್ಣು ಮಕ್ಕಳು ಸುರಕ್ಷಿತವಾಗಿದ್ದಾರೆ' ಎಂದು ವಾದಿಸುವ ಯುವಕನಿಗೆ ಸಖಿಯದು ನೇರ ಪ್ರಶ್ನೆ. 'ನೀವೆಂದಾದರೂ ವೇಶ್ಯೆಯರ ಬಳಿ ಹೋಗಿದ್ದೀರಾ', 'ಇಲ್ಲ' ಎಂದು ತಡವರಿಸುವ ಯುವಕನಿಗೆ ಹೇಳುತ್ತಾಳೆ - 'ಹಾಗಾದರೆ ಯಾರನ್ನಾದರೂ ರೇಪ್ ಮಾಡಿರಲೇಬೇಕು.'

ಪುಸ್ತಕದ ಉದ್ದಕ್ಕೂ ಕಾಣುವುದು ಸಖಿಯ ಇಂತಹ ನೇರ ನುಡಿ, ದಿಟ್ಟ ನಡೆ, ಗಿಡಮೂಲಿಕೆಗಳನ್ನು ಪರಿಚಯಿಸುವ ತರಬೇತಿ ಕಾರ್ಯಾಗಾರಕ್ಕೆ ಬಂದ ಪುರುಷ ಮಹಾಶಯನೊಬ್ಬ 'ಈ ಮಹಿಳೆಯರ ಬಾಯಿ ಮುಚ್ಚಿಸಲು ಏನಾದರೂ ಔಷಧಿ ಇದೆಯೇ' ಕಿಡಿಗೇಡಿ ಪ್ರಶ್ನೆ ಕೇಳುತ್ತಾನೆ. ಹೆಂಗಸರ ಬಾಯಿ ಮುಚ್ಚಿಸುವುದಕ್ಕೆ ಬೇಕಾದಷ್ಟು ಮದ್ದುಗಳು ಇವೆ. ಹೆಂಗಸರು ಮಾತನಾಡಿದಾಗ ತಕ್ಷಣ "ಗಂಡಸರಿಗೆ ಹೆದರಿಗೆ ಆಗುತ್ತದಲ್ಲ, ಅವರು ಕಂಗಾಲಾಗುತ್ತಾರಲ್ಲ, ಅದಕ್ಕೆ ಮದ್ದಿಲ್ಲ' ಸಖಿಯ ಉತ್ತರ.

ಸಣ್ಣ ಸಣ್ಣ ಘಟನೆಗಳಲ್ಲಿ, ಸ್ತ್ರೀ ಜಗತ್ತಿನ ಸೂಕ್ಷ್ಮ ಸತ್ಯಗಳನ್ನು, ಅನುಭವಗಳನ್ನು ವಾಣಿ ಹೊರಹಾಕಿದ್ದಾರೆ. ಹೆಚ್ಚು ಸವಲತ್ತುಗಳಿಲ್ಲದ ಹಳ್ಳಿಗಾಡಿನ ಹೆಣ್ಣು ಮಕ್ಕಳ ಬಡತನದ ಬದುಕಿನಲ್ಲಿ ಮೂಡುತ್ತಿರುವ ಜಾಗೃತಿ, ಎಚ್ಚರ - ಇವೆಲ್ಲವನ್ನೂ ಈ ಪುಟ್ಟ ಪುಸ್ತಕದಲ್ಲಿ ಲೇಖಕಿ ಹಿಡಿಯ ಹೊರಟಿದ್ದಾರೆ. ತಮ್ಮ ಸಂಶೋಧನೆ, ಸಂಘಟನೆಯ ಅನುಭವಗಳು ವಾಣಿಯವರಿಂದ ಮತ್ತಷ್ಟು ಬರೆಸಲಿ ಎಂದು 'ಅಚಲ' ಹಾರೈಸುತ್ತದೆ. ಸಖೀ ಸಹಗಮನದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

1. ವೇಶ್ಯಾವೃತ್ತಿ ಅನಿವಾರ್ಯ ?

ಮಹಿಳಾ ಸ್ಥಾನಮಾನದ ಬಗ್ಗೆ ಒಂದು ಗುಂಪಿಗೆ ವಿಚಾರಗಳನ್ನು ಮುಂದಿಡುತ್ತಿದ್ದೆ. ನನ್ನ ಪ್ರೀತಿಯ ವಿಷಯ. ಸ್ವಲ್ಪ ಆವೇಶವೂ ಸೇರಿಕೊಂಡಿತ್ತು. ಮಾತಾಡುತ್ತಾ ವೇಶ್ಯಾವೃತ್ತಿಯ ಪ್ರಸ್ತಾಪ ಬಂದಿತ್ತು. ಸ್ವಲ್ಪ ಹೊತ್ತಿನಲ್ಲೇ ಒಬ್ಬ ಯುವಕ ಏನೋ ಕೇಳಲು ಎದ್ದುನಿಂತ. ನನ್ನ ಮಾತುಗಳನ್ನು ಕೇಳಿ ಪ್ರಶ್ನೆಯೊಂದಕ್ಕೆ ತಯಾರಾದವರನ್ನು ಪ್ರೋತ್ಸಾಹಿಸುತ್ತಾ, ಅವನಿಗೊಂದು ಬುದ್ಧಿವಂತಿಕೆಯ ಉತ್ತರ ಕೊಡುವುದಕ್ಕೆ ತಯಾರಾದೆ. ಅವನು ಪ್ರಾರಂಭಿಸಿಯೇ ಬಿಟ್ಟ. "ಅಲ್ಲಾ ಮೇಡಂ... ನಮ್ಮ ಸಮಾಜದಲ್ಲಿ ವೇಶ್ಯಾವೃತ್ತಿ ಇರುವುದು ಅಗತ್ಯವಂತೆ ಅಲ್ಲವೇ ? ವೇಶ್ಯಾವೃತ್ತಿ ಇಲ್ಲದೇ ಹೋಗಿದ್ದರೆ ಗೌರವಸ್ಥ ಕುಟುಂಬದ ಹೆಣ್ಣು ಮಕ್ಕಳು ದಾರಿ ನಡೆಯುವುದು ಸಾಧ್ಯವಾಗುತ್ತಿರಲಿಲ್ಲ. ನೋಡಿ ಲೆಕ್ಕವಿಲ್ಲದಷ್ಟು ರೇಪ್‌ಗಳು ನಡೆಯುತ್ತಿದ್ದವು. ವೇಶ್ಯಾವೃತ್ತಿ ಇರುವುದರಿಂದ ನಮ್ಮ ಹೆಣ್ಣು ಮಕ್ಕಳು ಸುರಕ್ಷಿತವಾಗಿದ್ದಾರೆ" ಒಂದೇ ಉಸಿರಿಗೆ ಹೇಳಿದ. ನನ್ನ ಸಿಟ್ಟು ನೆತ್ತಿಗೇರುತ್ತಿತ್ತು. ಸಂಬದ್ಧವೋ ಅಸಂಬದ್ಧವೋ ಇಂತಹ ವಾದಗಳು ವೇಶ್ಯಾವೃತ್ತಿಯನ್ನು ಸಮರ್ಥಿಸುವುದಂತೂ ಹೌದು. ಅಷ್ಟೇ ಅಲ್ಲ, ಗಂಡಸರ ವರ್ತನೆಗೆ ಲಗಾಮು ಹಾಕಬೇಕಾದರೆ ಒಂದಷ್ಟು ಮಹಿಳೆಯರು ಬಲಿಯಾಗಬೇಕು ಎಂದು ತಾನೇ ಇದರ ಅರ್ಥ ಅಸಹನೆಯಿಂದ ಹೂಂಗುಟ್ಟಿದೆ.

ಪ್ರತಿರೋದಿಸಲು ನೂರಾರು ವಿಚಾರಗಳು ಮನಸ್ಸಿನೊಳಗೆ ಬರುತ್ತಿದ್ದರೂ ಸಮರ್ಥವಾಗಿ ಹೇಗೆ ರೂಪಿಸುವುದು ಅಂತ ತಿಳಿಯದೆ ಒಳಗೊಳಗೇ ಕಕ್ಕಾಬಿಕ್ಕಿಯಾಗಿದ್ದೆ. ತರಬೇತಿದಾರಳ ಸ್ಥಾನದಲ್ಲಿ ಸಮಾಧಾನದಿಂದ ವ್ಯವಹರಿಸುವುದು ಅನಿವಾರ್ಯವಾಗಿತ್ತು. ತಡವರಿಸುತ್ತಾ "ಹಾಗಲ್ಲ..." ಎಂದು ಶುರುಮಾಡಿದೆ. 'ನೀವೆಂದಾದರೂ

ಸ್ವಾವಲಂಬನೆಯ ಹಾದಿಯಲ್ಲಿ...

ಸುಖ್ತಾವ ಎನ್ನುವುದು ಯಾರಿಗೂ ಅಷ್ಟಾಗಿ ಪರಿಚಯ ವಿಲ್ಲದ ಗ್ರಾಮ. ಕುಗ್ರಾಮ. ಮಧ್ಯಪ್ರದೇಶದ ನರ್ಮದಾ ಕಣಿವೆಯಲ್ಲಿದೆ. ಈವರೆಗೂ ತೂಕಡಿಸುತ್ತ ಇದ್ದಂತಿದ್ದ ಈ ಗ್ರಾಮ ಈಗ ಒಮ್ಮಿಂದೊಮ್ಮೆ ಮಹಾ ರಾಷ್ಟ್ರದಲ್ಲಿ 'ಭಲೇ' ಹೆಸರು ಮಾಡಿದೆ. ಇದಕ್ಕೆ ಕಾರಣ ಈ ಗ್ರಾಮದ ಬುಡಕಟ್ಟು ಜನಾಂಗ ಮತ್ತು ದಲಿತ ಮಹಿಳೆಯರ ಕೋಳಿ ಸಾಕಾಣೆಯ ಪ್ರಯತ್ನ.

ಕೋಳಿ ಸಾಕಣೆ ಸಾಮಾನ್ಯವಾಗಿ ಖಾಸಗಿ ವಲಯದ ದೊಡ್ಡ ದೊಡ್ಡ ಕುಳಗಳಿಗೇ ಸರಿ. ಅದರಲ್ಲಿ ರಿಸ್ಕ್ ಫ್ಯಾಕ್ಟರ್ ಬೇರೆ ಸ್ವಲ್ಪ ಜಾಸ್ತಿಯೇ ಇದೆ ನೋಡಿ. ಸುಖ್ತಾವ ಗ್ರಾಮದ ಈ ಮಹಿಳೆಯರಿಗೆ ಇವೆಲ್ಲದರ ಅರಿವಿಲ್ಲದೇ ಇರಲಿಲ್ಲ. ಅಷ್ಟಕ್ಕೂ ಅವರೆಲ್ಲ ತಂತಮ್ಮ ಹಿತ್ತಿಲುಗಳಲ್ಲಿ ಕೋಳಿ ಸಾಕು ವವರೇ, ಹಿತ್ತಲಲ್ಲಿ ಪ್ರತ್ಯೇಕವಾಗಿ ಮಾಡುವುದನ್ನೇ, ಹಿತ್ತಲಲ್ಲಿ 'ಸಂಘಟಿತ'ರಾಗಿ ಮಾಡಿದರೆ ಹೇಗೆ ಎಂಬುದು ಆಲೋಚನೆ ಅವರಲ್ಲಿ ಮೂಡಿದ್ದೇ ತಡ, ಸಹಕಾರಿ ಕಾಯಿದೆಗೆ ಅನುಗುಣವಾಗಿ ಒಂದು ಸಂಘ ಕಟ್ಟಿಕೊಂಡರು. ಉತ್ಸಾಹ ಇಮ್ಮಡಿಸಿತು, ಪ್ರಯತ್ನವೂ ಸಫಲವಾಯಿತು.

ಬಡತನದ ಗೆರೆಯ ಕೆಳಗಿದ್ದ; ಬುಡಕಟ್ಟು ಜನಾಂಗ ಹಾಗೂ ದಲಿತ ವರ್ಗಕ್ಕೆ ಸೇರಿದ ಸುಮಾರು 375 ಮಹಿಳೆಯರು ವರ್ಷಕ್ಕೆ ತಲಾ 12000 ರೂ ಗಳಿಸು ವಂತಾಗಿ, ಅವರ ಮುಖಗಳಲ್ಲೀಗ ಸಂತಸದ ಗೆರೆ ಮೊಡುವಂತಾಯಿತು.

ವ್ಯವಹಾರಕ್ಕಿಳಿದಾಗ ತೊಂದರೆ ತಾಪತ್ರಯಗಳು ಬಾರದಿರುತ್ತವೆಯೇ ? ಹಠಾತ್ತಾಗಿ ಕಾಣಿಸಿಕೊಂಡ ಹಕ್ಕಿ ಜ್ವರ ಸರಿಯಾದ ಪೆಟ್ಟನ್ನೇ ಕೊಟ್ಟಿತು. ಜೊತೆಗೆ ಮಾಧ್ಯಮ ಗಳು ಅದನ್ನು ಬಿತ್ತರಿಸಿದ ರೀತಿ ಅದು ಜನರಲ್ಲಿ ಮೂಡಿಸಿದ ಭೀತಿ; ನಷ್ಟದಿಂದ ತತ್ತರಿಸುವಂತಾದರೂ ಈ ಮಹಿಳೆಯರು ಧೃತಿ ಗೆಡಲಿಲ್ಲ. ನಗರಗಳ ಮಾರುಕಟ್ಟೆ ಬೇಡವೆಂದು ನಿರ್ಧರಿಸಿ ವ್ಯಾನ್‌ಗಳಲ್ಲಿ ಕೋಳಿಗಳನ್ನು ತುಂಬಿಕೊಂಡು ಹಳ್ಳಿಗಳತ್ತ ಹೊರಟರು. ಹಳ್ಳಿಗಳಲ್ಲಿ ಒಳ್ಳೆಯ ಬೆಲೆ ಸಿಗದು; ಆದರೆ ನಷ್ಟವನ್ನಂತೂ ಕಡಿಮೆ ಮಾಡಬಹುದಲ್ಲ.

ಈ ಬಾರಿಯೂ ನಷ್ಟ ಬೆಂಬತ್ತಿರುವಂತೆ ಇದೆ. ಆದರೆ ಈ ಮಹಿಳೆಯರ‍್ಯಾರೂ ಕಂಗೆಟ್ಟಿಲ್ಲ. ಕೃಷಿ ಚಟುವಟಿಕೆಗಳಿಗೆ ನೀಡಲಾಗುವ ಸಬ್ಸಿಡಿಗಳನ್ನು ಕೋಳಿ ಸಾಕಾಣೆ ಉದ್ಯಮಕ್ಕೂ ದೊರಕೀತು ಎಂಬ ಆಶಾಭಾವನೆ ಇವರಲ್ಲಿದೆ. ಹಾಗೊಂದು ವೇಳೆ ದೊರಕದಿದ್ದರೆ ? ಅಡ್ಡಿಯಿಲ್ಲ. ಅದಕ್ಕೂ ಅವರು ತಯಾರು. 'ಹಿತ್ತಲಲ್ಲೇ ಕುರಿ ಸಾಕಣೆ' ಯೋಜನೆಯನ್ನೂ ಇವರು ತಮ್ಮ ಕಿಸೆಯಲ್ಲಿ ಅಲ್ಲಲ್ಲಿ ಸೆರಗಿನಲ್ಲಿ ಕಟ್ಟಿಟ್ಟು ಕೊಂಡಿದ್ದಾರೆ. ಇವರ ಪ್ರಯತ್ನಗಳು ಫಲಪ್ರದವಾಗಲಿ ಅನ್ನೋಣವೇ ?

ಪ್ರತಿದಿನ ಪೇಪರ್‌ನಲ್ಲಿ/ಟೀವಿ ಚಾನೆಲ್‌ಗಳಲ್ಲಿ ಕಂಡು ಬರುವುದು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಸಂಗತಿಗಳೇ. ಅಂತಹವುದರಲ್ಲಿ ಯಾವುದೋ ಮೂಲೆಯಿಂದ ಬಂದ ಇಂತಹ ಸಂಘಟನೆಯ ಯಶಸ್ಸಿನ ಸುದ್ದಿ ಎಷ್ಟು ಚೇತೋಹಾರಿಯಾಗಿದೆ !

ಹೆಣ್ಣು ಮಕ್ಕಳ ಮೇಲುಗೈ

ಸುದ್ದಿ ಹೊಸತೇನೂ ಅಲ್ಲ. ಪ್ರತಿ ವರ್ಷದಂತೆ ಈ ಬಾರಿಯೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮತ್ತೆ ಹೆಣ್ಣು ಮಕ್ಕಳದೇ ಮೇಲುಗೈ. ಶೇ. 71.31 ಬಾಲಕಿಯರು ಉತ್ತೀರ್ಣರಾದರೆ, ಪಾಸಾದ ಹುಡುಗರ ಸಂಖ್ಯೆ ಶೇ. 66.19 ಮಾತ್ರ.

ಆದರೆ ಇದೇ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಕಾಲೇಜು ಮೆಟ್ಟಲು ಹತ್ತಿ, ನೂರೊಂದು ರಂಗಗಳಲ್ಲಿ, ಪುರುಷರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನಿಮಗೆ ಕಾಣಸಿಗುವುದಿಲ್ಲ. ಕಾರಣವೂ ಹೊಸದೇನೂ ಅಲ್ಲ. ಗಂಡು ಮಕ್ಕಳ ಓದಿಗೆ ನೀಡುವ ಆದ್ಯತೆಯನ್ನು ಹೆಣ್ಣು ಮಕ್ಕಳ ಓದಿಗೆ ಪಾಲಕರೂ, ಪ್ರಾಧ್ಯಾಪಕರೂ ಒಟ್ಟು ಸಮಾಜ ನೀಡುತ್ತಿಲ್ಲ. ಇಂದು ವೃತ್ತಿ ಶಿಕ್ಷಣಗಳು ಬಲು ದುಬಾರಿ ಯಾಗಿ, ವಿದ್ಯಾವಂತ ತಂದೆ ತಾಯಿಯರು ಕೂಡಾ ಅಷ್ಟು ಹಣ ಹಾಕಿ ಹೆಣ್ಣು ಮಕ್ಕಳನ್ನು ಓದಿಸಲು ಹಿಂಜರಿ ಯುತ್ತಿದ್ದಾರೆ. ಒಂದು ದಶಕದಲ್ಲಿ ಕೊಳ್ಳುಬಾಕತನವನ್ನು ಆತುರದಿಂದ ಬಾಚಿಕೊಂಡ ಸಮಾಜದಲ್ಲಿ, ವಿವಾಹ ಕೂಡ ಅತ್ತ ಆಡಂಬರದ ಅಬ್ಬರವಾಗಿ, ಪ್ರತಿಷ್ಠೆಯಾಗಿ, ಹೆಣ್ಣು ಹೆತ್ತವರ ಮೇಲೆ ಹಿಮಾಲಯದ ಹೊರೆಯಾಗಿದೆ. ಇಂಜಿನಿಯರ್ ಓದಿದ ಹುಡುಗಿ ನಿಷಾ ತನ್ನ ವರದಕ್ಷಿಣೆಯಾಗಿ ಎರಡು ಫ್ರಿಜ್, ಎರಡೆರಡು ಒಗೆಯುವ ಯಂತ್ರ, ಮಿಕ್ಸಿ, ಟಿವಿ ಇವೆಲ್ಲವುಗಳ ಜೊತೆಯಲ್ಲಿ ಕುಳಿತ ಚಿತ್ರ ಜನ ಸಮೂಹದ ಮನಸ್ಸಿನಲ್ಲಿ ಅಚ್ಚಳಿಯದಂತೆ ಒತ್ತಿ ನಿಂತಿದೆ. 'ಅಷ್ಟು ಓದಿಸಿಯೂ, ಎಷ್ಟು ವರದಕ್ಷಿಣೆ ಕೊಡಬೇಕಾಗುತ್ತೆ ನೋಡು' ಗೆಳತಿಯೊಬ್ಬಳು ಉದ್ಗರಿಸಿದಳು. 'ಅಷ್ಟು ಕೊಡಬೇಕಿಲ್ಲ' ಎಂದರೆ ನಂಬದ ಸಮಾಜಕ್ಕೆ ಕಡೆಗೂ ಉತ್ತರವಾಗಿ, ಕೊರಳಿಗೆ ಉರುಳಾಗಿ ತಾಳಿ ಬೀಳುವ ಮೊದಲು, ಕೊನೆಯ ಗಳಿಗೆಯಲ್ಲಾದರೂ ನಿಷಾ ಅಂತಹ ಅತಿಯಾಸೆಯ ಸಂಬಂಧವನ್ನು ಧಿಕ್ಕರಿಸಿ ನಿರಾಕರಿಸಿದ್ದು ನಮ್ಮದಿಯ ನಿಟ್ಟುಸಿರು ತಂದಿತು.

ನಮ್ಮ ದೇಶದಲ್ಲಿ 35 ಮಿಲಿಯನ್ ಬಾಲಕಿಯರು ಶಾಲೆಯಿಂದ ಹೊರಗುಳಿದಿದ್ದರೆ. ನಮ್ಮ ರಾಜ್ಯದಲ್ಲಿ 1961ರಲ್ಲಿ ಶೇಕಡ 16.7ರಷ್ಟು ಮಹಿಳಾ ಸಾಕ್ಷರತೆ ಶೇಕಡ 50ರ ಗಡಿ ದಾಟಲು ಸ್ವತಂತ್ರ್ಯ ಬಂದು 50 ವರ್ಷಗಳು ಕಾಯಬೇಕಾಯಿತು.

ಬರೀ ಎಸ್ಸೆಸ್ಸೆಲ್ಸಿ ಮಾತ್ರವಲ್ಲ, ಡಿಗ್ರಿಯಲ್ಲಿ, ಸ್ನಾತಕೋತ್ತರ ಪದವಿಯಲ್ಲೂ ಮುಂದುವರೆದು ಬಾಲಕಿಯರು ಮೇಲೆ ಬರಲಿ, ಹೆಣ್ಣು ಮಕ್ಕಳ ಪ್ರತಿಭೆ, ಬುದ್ಧಿವಂತಿಕೆ ಅರಳುವಂತಹ ಪರಿಸರ ಈ ಸಮಾಜದಲ್ಲಿ ಮೂಡಲಿ ಎಂದು ಆಶಿಸುವ ಈ ಹೊತ್ತಲ್ಲಿ, ಮೋನಾ ಪ್ರುತಿ, ಐ.ಎ.ಎಸ್. ಪರೀಕ್ಷೆಯಲ್ಲಿ ಮೊದಲ ಸ್ಥಾನವನ್ನು ಪಡೆದಿರುವುದು ಸಂತಸದ ವಿಷಯವಾಗಿದೆ.

ಕೆಸರಿನಿಂದ ತಿಳಿಗೊಳಕ್ಕೆ

ಸಂಪ್ರದಾಯವನ್ನು ಮುರಿಯುವುದೆಂದರೇನು ಸುಲಭದ ಮಾತೇ? ಅದೂ ಮಹಿಳೆಯರಿಗೆ - ಗ್ರಾಮೀಣ ಮಹಿಳೆಯರಿಗೆ ಅಷ್ಟೇ ಅಲ್ಲ, ತಾಯಿ ತುಳಿದ ಹಾದಿಯನ್ನೇ ಮಗಳೂ ತುಳಿಯಬೇಕು; ವಿಶ್ವದ ಪ್ರಾಚೀನ ವೃತ್ತಿಯನ್ನೇ ಅವಳೂ ಅನುಸರಿಸಬೇಕೆಂಬ ಪದ್ಧತಿಯಿರುವ ಹಳ್ಳಿಗಳಲ್ಲಂತೂ ಕಷ್ಟ ಕಷ್ಟ! ಇಂತಹ ಊಹಿಸಲೂ ಅಸಾಧ್ಯವಾದ ಕೆಲಸವನ್ನು ಹತ್ತು ವರ್ಷ ಗಳಷ್ಟು ಹಿಂದೆಯೇ ಮಾಡಿದ, ಸಂಪ್ರದಾಯದ ಹೆಸರಿನಲ್ಲಿ ಜಾರಿಯಲ್ಲಿದ್ದ ಅಸಹ್ಯ ಪದ್ಧತಿಯನ್ನು ಧಿಕ್ಕರಿಸಿ ಹೊರ ಬಂದ ಚಂದ್ರಲೇಖಾರವರನ್ನು ನಿಜಕ್ಕೂ ಮೆಚ್ಚಬೇಕು. ಹೊರ ಬಂದದ್ದಷ್ಟೇ ಅಲ್ಲ, ಇದೇ ವೃತ್ತಿಯನ್ನು ಅವಲಂಬಿಸಿದ್ದ ಇತರ ಹೆಣ್ಣು ಮಕ್ಕಳಿಗೆ ಮೇಲ್ಪಂಕ್ತಿ ಹಾಕಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಇಪ್ಪತ್ತು ವರ್ಷಗಳ ಕಾಲ ವೇಶ್ಯಾವೃತ್ತಿಯಲ್ಲಿ ತೊಡಗಿದ್ದ ಚಂದ್ರಲೇಖಾ ಈಗ ತಮ್ಮದೇ ಊರಿನಲ್ಲಿ ಶಾಲಾ ಶಿಕ್ಷಕಿಯಾಗಿದ್ದಾರೆ. ತನ್ನಂತಹ ಮಹಿಳೆಯರ ಏಳಿಗೆಗೆ ಶ್ರಮಿಸುತ್ತಿದ್ದಾರೆ.

ನಟ್ ಪುರ್‌ವಾ ಎನ್ನುವುದು ಉತ್ತರ ಪ್ರದೇಶದ ಲಕ್ನೋ ಸಮೀಪದ ಒಂದು ಹಳ್ಳಿ. ಇಲ್ಲಿನ ವಿಚಿತ್ರ ಸಂಪ್ರದಾಯವನ್ನು ನೋಡಿ/ಕೇಳಿ ಅಳಬೇಕೋ ನಗಬೇಕೋ, ಕೆರಳಬೇಕೋ ತಿಳಿಯದು. ಇಲ್ಲಿನ ಪುರುಷರು ಯಾರೂ ಕೆಲಸ ಕಾರ್ಯಕ್ಕೆ ಹೋಗುವುದಿಲ್ಲ. ಆದರೆ ಮಹಿಳೆಯರೇ ದುಡಿಯಬೇಕು. ಆ ದುಡಿಮೆಯಾದರೂ ಎಂಥದ್ದು? ವೇಶ್ಯಾವೃತ್ತಿ! ಇದು ತಲೆತಲಾಂತರದಿಂದ ಬರೆದ ಪದ್ಧತಿಯಂತೆ. ಇದು ಇಷ್ಟವಿಲ್ಲದಿದ್ದರೂ ಮಹಿಳೆಯರು 'ವಿಧಿ' ಅಂತಂದು ಕೊಂಡು, 'ಹೆಣ್ಣು ಜನ್ಮ' ಎಂದು ತಮ್ಮನ್ನೇ ತಾವು ಹಳಿದುಕೊಂಡು, ಸಂದರ್ಭಕ್ಕೆ ಮೌನವಾಗಿ ಶರಣಾಗಿ ಪೀಳಿಗೆಗಳೇ ಕಳೆದಿವೆ. ಕೆಲವು ಹೆಣ್ಣು ಮಕ್ಕಳಿಗೆ ಈ ಸಂಪ್ರದಾಯದಲ್ಲಿ ವಿನಾಯಿತಿ ಇದೆ. ಅಂದರೆ, ಇಲ್ಲಿನ ಕುಟುಂಬಗಳ ಸೊಸೆಯಂದಿರು ಈ ಪದ್ಧತಿ ಅನುಸರಿಸುವಂತಿಲ್ಲ. ಮನೆಯ ಹೆಣ್ಣು ಮಕ್ಕಳಿಗೆ ಮಾತ್ರ ಈ ಬರ್ಬರ ಸಂಪ್ರದಾಯ. 8ನೇ ತರಗತಿಯವರೆಗೆ ಕಲಿತಿರುವ ಚಂದ್ರಲೇಖಾ ತಮ್ಮ 15ನೇ ವಯಸ್ಸಿನಲ್ಲಿ ಈ ವೃತ್ತಿಗೆ ಬಂದರು. "ಕಸಕ್ಕಿಂತ ಕಡಿಮೆ ದರದಲ್ಲಿ ಹೆಣ್ಣು ದೇಹಗಳು ಬಿಕರಿಯಾಗುವಂತಹ ಸಂಪ್ರದಾಯವುಳ್ಳ ಈ ಹಳ್ಳಿಗೆ ಜನ ಎಲ್ಲೆಲ್ಲಿಂದಲೋ ಬರುತ್ತಾರೆ; ಎಂಥೆಂಥವರೋ ಬರುತ್ತಾರೆ. ನರಕ-ನರಕ" ಎಂದು ನೋವಿನಿಂದ ಹೇಳುವ ಚಂದ್ರಲೇಖಾ 20 ವರ್ಷಗಳನ್ನು ಈ ನರಕದಲ್ಲಿಯೇ ಸವೆಸಿದರು. ಅನೈತಿಕವಾಗಿಯೇ ಹುಟ್ಟಿದ ಮೂವರು ಗಂಡು ಮಕ್ಕಳಿಗೂ ತಾಯಿಯ ಈ ವೃತ್ತಿ ಮುಜುಗರ ಉಂಟುಮಾಡುತ್ತಿತ್ತು. ಆದರೆ ಆದಾಯ ಗಳಿಕೆಗೆ ಯಾವ ಪರ್ಯಾಯ ಮಾರ್ಗವೂ ಕಾಣಲಿಲ್ಲ. ಅದೇ ಹುಡುಕಾಟದಲ್ಲಿದ್ದಾಗ, ಆಶಾ ಎಂಬ ಸರ್ಕಾರೇತರ ಸೇವಾ ಸಂಸ್ಥೆಯೊಂದು ಇಲ್ಲಿ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಲು ಮುಂದಾಯಿತು. ಸುದ್ದಿ ತಿಳಿದೊಡನೆ ಚಂದ್ರಲೇಖಾ ಒಂದು ಕ್ಷಣವನ್ನೂ ವ್ಯರ್ಥ ಮಾಡದೆ, ಅವರನ್ನು ಸಂಪರ್ಕಿಸಿದರು. ಚಂದ್ರಲೇಖಾಗೆ ಒಂದು ಗೌರವಯುತ ಬಾಳನ್ನು ಆರಂಭಿಸುವ ಅವಕಾಶ ಸಿಕ್ಕಿತು. ಈಗ ಆ ಶಾಲೆಯಲ್ಲಿ ಆಕೆ ಪ್ರಾಥಮಿಕ ಶಿಕ್ಷಕಿ.

ಮಕ್ಕಳಿಗೆ ಕಲಿಸುವುದಷ್ಟೇ ನನ್ನ ಜವಾಬ್ದಾರಿ ಎಂದು ಚಂದ್ರಲೇಖಾ ಭಾವಿಸಿಲ್ಲ. ತನ್ನ ಹಳ್ಳಿಯಲ್ಲಿ ಮನೆಮನೆಗೂ ತೆರಳಿ ವಿದ್ಯಾಭ್ಯಾಸದ ಮಹತ್ವವನ್ನು ವಿವರಿಸುತ್ತಾರೆ. ಅದರಲ್ಲೂ ಹೆಣ್ಣು ಮಕ್ಕಳಿಗೆ ಅದರಿಂದಾಗುವ ಒಳಿತನ್ನು ಕುರಿತು ಹೇಳುತ್ತಾರೆ; ಅವರನ್ನು ಶಾಲೆಗೆ ಕಳಿಸುವಂತೆ ಮನ ಒಲಿಸುತ್ತಾರೆ. ಆರಂಭದಲ್ಲಿ ಈ ವಿಷಯದ ಸಲುವಾಗಿ ಹಳ್ಳಿಗರ ಕೋಪ ತಾಪ ಧಿಕ್ಕಾರವನ್ನೂ ಆಕೆ ಎದುರಿಸ ಬೇಕಾಯಿತು. ಮೇಲಾಗಿ, ಇದೇ ಜೀವನ ವಿಧಾನಕ್ಕೆ ಒಗ್ಗಿಹೋಗಿದ್ದ ಅಲ್ಲಿನ ಜನಕ್ಕೆ ಯಾವುದೇ ಬದಲಾವಣೆ ಬೇಡವಾಗಿತ್ತು. ಚಂದ್ರಲೇಖಾ ತಮ್ಮ ಗಮನವನ್ನು ಮಹಿಳೆಯರತ್ತ ಹರಿಸಿದ್ದು ಆಗಲೇ. ಮಹಿಳೆಯರು ತನ್ನ ದೃಷ್ಟಿಕೋನವನ್ನು ಖಂಡಿತಾ ಅರಿತುಕೊಳ್ಳುತ್ತಾರೆ ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು. ಆ ನಂಬಿಕೆಯೂ ಸುಳ್ಳೇನೂ ಆಗಲಿಲ್ಲ. ಇದರ ಪರಿಣಾಮ ವಾಗಿ ನಟ್‌ಪುರ್‌ವಾ ಹಳ್ಳಿಯ ಹೆಣ್ಣು ಮಕ್ಕಳು ಈಗ ಶಾಲೆಗೆ ಹೋಗುತ್ತಿದ್ದಾರೆ. ಅಷ್ಟಕ್ಕೆ ಸಂತೃಪ್ತರಾಗುವ ಸ್ವಭಾವ ಚಂದ್ರಲೇಖಾರದಲ್ಲ. ಹೆಣ್ಣು ಮಕ್ಕಳಿಗೊಂದು ಹೈಸ್ಕೂಲು, ನಂತರ ಒಂದು ಕಾಲೇಜು... ಚಂದ್ರಲೇಖ ಪಟ್ಟಿ ಮಾಡಿಟ್ಟುಕೊಂಡಿದ್ದಾರೆ.

ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ವೊಂದಿದ್ದರೆ ವೇಶ್ಯಾವೃತ್ತಿಯಿಂದ ಮಹಿಳೆಯರನ್ನು ಹೊರ ತರಬಹುದು ಎನ್ನುವ ಚಂದ್ರಲೇಖಾ ಸ್ವಸಹಾಯ ಗುಂಪು ಗಳನ್ನು ಸ್ಥಾಪಿಸಿ 'ಮೈಕ್ರೋ ಫೈನಾನ್ಸ್' ವ್ಯವಸ್ಥೆ ರೂಪಿಸಿದ್ದಾರೆ. ಇದು ಆರ್ಥಿಕ ಭದ್ರತೆಯನ್ನು ಒದಗಿಸಿ ರುವ ಹಿನ್ನೆಲೆಯಲ್ಲಿ ಹಳ್ಳಿಯ ಬಹುತೇಕ ಮಹಿಳೆಯರು ತಮ್ಮ ಮುಂದಿದ್ದ ಏಕೈಕ ವೃತ್ತಿಗೆ ವಿದಾಯ ಹೇಳಿ, ಹೊಲಿಗೆ-ಕಸೂತಿ ಇತ್ಯಾದಿ ಕಲಿತು ಅದನ್ನು ಗಳಿಕೆಯ ಮಾರ್ಗವಾಗಿಸಿಕೊಂಡಿದ್ದಾರೆ.

ಚಂದ್ರಲೇಖಾರ ಮುಂದಿರುವ ಮತ್ತೊಂದು ಮಹತ್ಕಾರ್ಯವೆಂದರೆ, ಯಾವುದೇ ಗಿರಾಕಿ ತಮ್ಮ ಹಳ್ಳಿಯ ಬಳಿ ಸುಳಿದಾಡದಂತೆ ಮಾಡುವುದು. "ಈ ಗಂಡಸರು ನಮ್ಮ ಹಳ್ಳಿಗೆ ಯಾವ ಒಳಿತನ್ನೂ ಮಾಡಿಲ್ಲ. ನಮ್ಮ ಹೆಣ್ಣುಮಕ್ಕಳ ಘನತೆ-ಗೌರವಗಳನ್ನು ಮಾತ್ರ ಕಸಿದುಕೊಂಡಿದ್ದಾರೆ" ಎಂಬು ಚಂದ್ರಲೇಖಾ ಕಣ್ಣೀರು ಹಾಕುತ್ತಾರೆ.

ಎಚ್. ಎನ್. ಗೀತಾ

ಗ್ರಾಮಾಭಿವೃದ್ಧಿಯಿಂದಲೇ ಕ್ಷೇಮಾಭ್ಯುದಯ

ಗ್ರಾಮ ಸುರಾಜ್ಯವೇ ಕರ್ನಾಟಕ ಸರ್ಕಾರದ ಮೂಲಧ್ಯೇಯ. ಸ್ಥಿರ ಮತ್ತು ಸಂಪದ್ಭರಿತ ಸಮಾಜಕ್ಕೆ ಆಧಾರ. ಸುಭದ್ರ ಗ್ರಾಮೀಣ ವಲಯ, ಗ್ರಾಮೀಣ ಜನತೆಯ ಮೂಲ ಆಶಯಗಳಾದ ಕೃಷಿ, ವಿದ್ಯುತ್, ನೀರು, ಆರೋಗ್ಯ ಮತ್ತು ಶಿಕ್ಷಣ ವಲಯಗಳಲ್ಲಿ ಸರ್ಕಾರದ ವಿಶೇಷ ಆಸ್ಥೆ, ವಸ್ತುನಿಷ್ಠ ಒತ್ತಾಸೆ. ಅವರು ಈ ಕ್ಷೇತ್ರಗಳಲ್ಲಿನ ಆಧುನಿಕ ಸೌಲಭ್ಯಗಳ ಫಲಾನುಭವಿಗಳಾಗಲು ಸರ್ಕಾರ ತನ್ನೆಲ್ಲ ಗಮನವನ್ನು ಕೇಂದ್ರೀಕರಿಸಿದೆ. ಸ್ಫೂರ್ತಿದಾಯಕ ಹೆಜ್ಜೆಗಳನ್ನಿಟ್ಟಿದೆ.

1. ಬರಗಾಲ ಸಮಸ್ಯೆಗೆ ದೀರ್ಘಾವಧಿ ಪರಿಹಾರ "ಸುಜಲ" ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆ.
2. ಕೃಷಿ ಮೂಲ ಸೌಕರ್ಯ ಅಭಿವೃದ್ಧಿಗಾಗಿ ಲೋಕನಾಯಕ ಜಯಪ್ರಕಾಶ್ ನಾರಾಯಣ ನಿಧಿಯ ಬಳಕೆ.
3. ಅಂತರ್ಜಲ ವೃದ್ಧಿಗಾಗಿ ಕೆರೆ ಅಂಗಳಗಳ ಅಭಿವೃದ್ಧಿ ಮತ್ತು ಕೆರೆಗಳ ಸಂರಕ್ಷಣೆ.
4. ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ಮತ್ತು ಅಕ್ಷರ ದಾಸೋಹದೊಂದಿಗೆ ಸಂಪೂರ್ಣ ಸಾಕ್ಷರತೆಯತ್ತ ದಾಪುಗಾಲು.

ಸಮೃದ್ಧ ಕರ್ನಾಟಕ – ಸ್ವಾವಲಂಬಿ ಕರ್ನಾಟಕ

ಕರ್ನಾಟಕ ವಾರ್ತೆ

ಕನ್ನಿಕೆಯರ ಕನಸುಗಳು

ಚೈತ್ರದ ಬಿಸಿಲಲಿ
ಹೂವಿನ ತೇರು
ನೀಲಿ ಪಾದರಿ, ಕೆಂಪು ಗುಲ್‌ಮೊಹರ್
ಹಳದಿ ಬಸಂತರಾಣಿ
ಟಾರು ರಸ್ತೆಯ ಮೇಲೆ
ಉದುರಿ ಮೆಲ್ಲ ಮೆಲ್ಲಗೆ
ನೆಲತುಂಬ ಹೂವಿನ ರಂಗೋಲಿ

ತರಗತಿಯಲಿ ಖಾಲಿ ಬೆಂಚುಗಳು
ಮರದ ತುಂಬ ನೀಲಿ ಪಾದರಿ
ಅರೆತೆರೆದ ಬಾಗಿಲ ಚೌಕಟ್ಟಿನಲಿ
ಮೌನದ ಗಾಳಿಗೆಜ್ಜೆ ನುಡಿಸುತ್ತ
ಬರಲೋ ಬೇಡವೋ
ಮದರಂಗಿ ಹೆಜ್ಜೆಗಳಿಕ್ಕುತ್ತ
ಬರುತ್ತಾರೆ ಕನ್ನಿಕೆಯರು
ಒಬ್ಬೊಬ್ಬರೇ

ಮೀಮಾಂಸೆ, ಟಿಪ್ಪಣಿ, ವ್ಯಾಕರಣ
ಮುಖ್ಯ ಪ್ರಶ್ನೆಗಳನ್ನೆಲ್ಲ
ಮುಚ್ಚಿಟ್ಟೆ

ಒಳಬಂದ ಒಬ್ಬೊಬ್ಬಳ
ಮದರಂಗಿ ಹೆಜ್ಜೆಗಳನ್ನು
ಹಣೆನವಿಲ ಬಿಂದಿಯನ್ನು
ಕಿವಿಗೆ ಮುತ್ತಿಟ್ಟು ಕೆನ್ನೆ
ಕೆಂಪಾಗಿಸಿದ ಬಂಗಾರದುಂಗುರಗಳನ್ನು
ಇಳಿದ ರೆಪ್ಪೆ ಹಿಂದೆ

ಮುಗಿಲಿಗೆ ರೆಕ್ಕೆ ಮೂಡಿದ
ಮಾನಸೋ ವಿಶಾಲ
ಹಂಸದ ಹಾಡನ್ನು
ಶಬ್ದ ಸ್ಪರ್ಶ ರೂಪ ರಸಗಂಧ
ಗಳಾಚೆಗೂ ಹೀರಿದೆ

ಸಂಸಾರದ ಸಾವಿರ ತಾಪತ್ರಯಗಳ ನಡುವೆ
ಮುಚ್ಚಿದ ಕಿಟಕಿಗಳ ತೆರೆದೆ
ಷಡ್ಜದ ಅಹಂಕಾರ ತೊರೆದು
ನಿಷಾದದ ವಿನಯಕ್ಕೆ ಶ್ರುತಿ ಹಿಡಿದೆ

ಕನ್ನಡಿಯೆದುರು ನಿಂತುಕೇಳಿದೆ
ನನ್ನ ಮಾನಸದಲ್ಲೇ ಹಸಿಯಾಡಿ ಮೂಡಿದ
ಎಲೆ ಕನ್ನಿಕೆಯರೇ
ನಿಮ್ಮ ಕನಸುಗಳನ್ನು ನನಗೆ ಎರೆಯಿರೇ

ದಿವ್ಯ ದರ್ಶಿನೀ ಕ್ಷಣದಲ್ಲಿ
ಶ್ರುತೀ ಭಗವತೀ ನೀಹಾರಿಕೆಗಳೂ
ಅಗಸ್ತ್ಯನ ಮರೆಯ ಅರುಂಧತಿಯರು
ಚಿನ್ನದ ತೇರಿಂದಿಳಿದು ಕಂಕುಳಲಿ
ಸಾವಿಲ್ಲದ ಸಾಸಿವೆಯನ್ನೆತ್ತಿ
ಒಳಬಂದರು

ಮುಟ್ಟಬಾರದ ಮೋಹನನ ಮೀರೆಯರು
ತಿನ್ನಬಾರದ ಹಣ್ಣಿನ ಹಂಬಲದ ಹಲುಲುತ್ತ
ಮಡಿಲಲ್ಲಿ ಮುಖವಿಟ್ಟು
ಬಿಕ್ಕಿದರು

ಕನ್ನಡಿಯ ಕನ್ನಿಕೇ
ಹಾಡಲೇನೇ ಹಂಸದ ಹಾಡು
ಹಣೆನವಿಲು ಬಿಂದಿಗಳ
ಬಂಗಾರದುಂಗುರಗಳ
ಮದರಂಗಿ ಲೇಪಗಳ
ಮೇಲು ಹೊದಿಕೆಗಳ ಹಂಗ
ತೊರೆದು
ಮಾನಸದ ಹಂಸದ ಹಾಡು
ಇನ್ನೊಮ್ಮೆ

ಸ. ಉಷಾ

ಹಡೆದವ್ವ ಬಂದಳು

ಒಂದು ಮುಂಬೆಳಗು
ಬಾನೆಲ್ಲ ಕೆಂಡ
ಬೂದಿ ಮಳೆ ಸುರಿದು
ಗಿಡಗಂಟೆ ಸುಟ್ಟು
ಹಕ್ಕಿ ಬಾಯ್ಬೂಯ್ ಬಿಟ್ಟು
ಮೂಡಣವೆಲ್ಲ ರಕ್ತ ಚೆಲ್ಲಾಡಿತು

ಒಂದು ನಡು ಮಧ್ಯಾಹ್ನ
ನಡು ನೆತ್ತಿಯ ಮೇಲೆ ಬಿಸಿಲುರಿದು
ಕಡಲಿಗೇ ಹತ್ತು ಕಿಚ್ಚು
ಮಧ್ಯ ಪ್ರಾಚ್ಯದಲಿ
ಜೀವಾದಿಗಳು ಲಿಬಿಲಿಬಿ ಒದ್ದಾಡಿತು

ಒಂದು ಸಂಜೆ
ಪಡುವಣದ ಮನೆಯಲ್ಲೂ ರಕ್ತ ಚೆಲ್ಲಾಡಿ
ಗೋಡೆಗಳು ಬಿದ್ದು ಗೋಡೆಗಳು ಎದ್ದು
ಗುಡಿಯಳಿದು ಗುಡಿ ಹುಟ್ಟಿ
ಗಡಿಯಳಿದು ಗಡಿ ಹುಟ್ಟಿ
ಗುಡಿಗಡಿಗಳುದುರಿ ಹೋಗುವ
ಕೆಂಪು ಕನಸು
ಕುಸಿತು
ತೊಟ್ಟಿಲ ಕೂಸುಗಳು ಚೀರಾಡಿತು

ಮೆತ್ತನ್ನ ಹತ್ತಿಯ ಹಾಸು ಚುಚ್ಚಿ
ಸುಖ ವಿಷವಾದಾಗ
ಹಡೆದವ್ವ ಬಂದ ಕನಸು

ಒಂದು ಚಿನ್ನದ ಬೆಳಗು
ಒಲವಿನಾಕಾಶ ಗಂಗೆ
ಭೂಮಿ ಬೂದಿಯ ತೋಯ್ಸಿ
ಮೋಡ ಮೊಲೆಹಾಲು ಸುರಿದು

ಮೂಡಣದ ಮೂಗುಕೆನ್ನೆ
ಹಾಲು ಮುತ್ತಿಗೇ ಕೆಂಪಾಗಿ
ಹಡೆದವ್ವ ಬಂದ ಕನಸು

ಬೊಗಸೆ ತುಂಬ ಹರಳೆಣ್ಣೆಯೊತ್ತಿ
ಸುಟ್ಟ ಗಾಯಗಳು ತಂಪಾಗಿ ಮಾದು
ಭೂರೇದ ಮಗೆ ತುಂಬಿ
ಹಾಲು ನೀರನು ಹಡೆದವ್ವ
ಹನಿಸಿದ ಕನಸು

ಬಾರವ್ವ ಬಾರೆ
ಯಾವ ನದಿಯ ನೀರೂ ಸಾಲದವ್ವ
ಬೇಕಿದೆ ಪ್ರೇಮಗಂಗೆಯ ಧಾರೆಧಾರೆ
ಸುಖದ ವಿಷ ತಿಂದು ಒಡಲು ಸೊಕ್ಕಿತು ತಾಯಿ
ತೇಯ್ದು ಕುಡಿಸವ್ವ ನಂಜು ಕಳೆವ ಬೇವು ಬೆಲ್ಲ
ಹಸಿದ ಬಾಯ ತುತ್ತುಗಳ
ತುಂಬಿದೊಡಲಿಗಿಟ್ಟು ಸಲಹಿದ ತಾಯೆ
ಹಂಚಿ ಉಣುವುದ ಕಲಿಸಿ
ಬದುಕಿಸಿಕೋ ಕೂಸುಗಳ

ಒಂದು ಬೆಳಗು
ಬೆಳ್ಳಿ ಮೂಡುವ ಮೊದಲೇ
ಮುಗಿಲ ತುಂಬಿ ಬೆಳಕು
ಬಾರಳೆ....
ಹಡೆದವ್ವ
ಬಂದಾಳೆ

ಸ. ಉಷಾ

ಏಡ್ಸ್ ಬಗ್ಗೆ ನಿಮಗೂ ಜವಾಬ್ದಾರಿ ಇದೆ !

ನಿಮಗಿದು ತಿಳಿದಿರಲಿ

- ಹೆಚ್‌ಐವಿ/ಏಡ್ಸ್ ಒಂದು ಸೋಂಕು ವೈರಾಣು
- ಅದು ಪ್ರಧಾನವಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಉಂಟಾಗುವ ಸೋಂಕು
- ಹೆಚ್‌ಐವಿ ಯಾವ ವಯಸ್ಸಿನವರಿಗಾದರೂ ಬರಬಹುದು.
- ಮುಂಜಾಗ್ರತಾ ಕ್ರಮದಿಂದ ಮೃತ್ಯುವಿನಿಂದ ಪಾರಾಗಲು ಸಾಧ್ಯ.
- ಹೆಚ್ಚಿನ ಮಾಹಿತಿ ಅಥವಾ ಹೆಚ್‌ಐವಿ ಪರೀಕ್ಷೆಗಾಗಿ ಹತ್ತಿರದ ತಾಲ್ಲೂಕು ಅಥವಾ ಜಿಲ್ಲಾ ಆಸ್ಪತ್ರೆಯಲ್ಲಿರುವ ಸ್ವಯಂಪ್ರೇರಿತ ಆಪ್ತ ಸಮಾಲೋಚನಾ ಮತ್ತು ಪರೀಕ್ಷಾ ಕೇಂದ್ರಕ್ಕೆ (ವಿಸಿಟಿಸಿ) ಭೇಟಿ ನೀಡಿರಿ. ಏಕೆಂದರೆ, ಇದು ನಿಮ್ಮ ಜೀವನದ ಪ್ರಶ್ನೆ.
- ಆರೋಗ್ಯವಂತ ಸಮಾಜ ನಿರ್ಮಾಣ ನಮ್ಮೆಲ್ಲರ ಜವಾಬ್ದಾರಿ. 'ಕರ್ನಾಟಕ ಏಡ್ಸ್‌ಮುಕ್ತ ರಾಜ್ಯ' ಎಂಬ ಹೆಮ್ಮೆ ನಮ್ಮದಾಗಲಿ

ಕರ್ನಾಟಕ ವಾರ್ತೆ

CPMG/KA/BG-8/2003-05
Posted at Basavanagudi P.O. On the 25/29th of every Month

RNI No. 45577/88

ಗಂಡಸುತನ - ಹೆಣ್ಣುತನ

ನಮ್ಮ ಮನೆಯೊಳಗೆ ಒಂದು ದೊಡ್ಡ ಚೇರಂಟೆ (ಶತಪದಿ)ಯೊಂದು ಬಂದಿತ್ತು. ನನ್ನ ಮಗಳು ಒಂದು ಕೋಲು ಹಿಡಿದು ಅದನ್ನು ಆಚೆ ಹಾಕಲು ಪ್ರಯತ್ನ ಪಡುತ್ತಿದ್ದಳು. ಹಾಗೆ ಮಾಡುತ್ತಲೇ, 'ಅಬ್ಬಬ ಇದು ಗಂಡು, ಗರ್ವ ನೋಡು ಅದರದ್ದು, ಹೆಣ್ಣು ಆಗಿದ್ದರೆ ಈಗ ಮುಟ್ಟಿದ ಕೂಡಲೇ ಚಕ್ಕುಲಿಯಾಗಿಬಿಡುತ್ತಿತ್ತು' ಎಂದು ಹೇಳುವುದು ಕೇಳಿಸಿತು. ಹೋಗಿ ನೋಡಿದರೆ ಚೇರಂಟೆ ಮುದುಡಿಕೊಳ್ಳದೆ ಹಿಂದೆ ಮುಂದೆ ಎಗರುವುದು ಕಂಡಿತು. ಅದಕ್ಕಿಂತಲೂ ನನಗೆ ಮಜಾ ಅನ್ನಿಸಿದ್ದು ಮಗು ಪ್ರಾಣಿಯಲ್ಲೂ ಅದರ ಗುಣಕ್ಕೆ ಸರಿಯಾಗಿ ಗಂಡು ಹೆಣ್ಣು ಅಂತ ಗುರುತಿಸಿದ ರೀತಿ ಯಾರು ಯಾವಾಗ ಕಲಿಸಿಕೊಟ್ಟರೋ ಗೊತ್ತಿಲ್ಲ. ಅಂತೂ 'ಗರ್ವ' ತೋರಿಸುವುದು ಗಂಡು 'ಮುದುರಿಕೊಳ್ಳುವುದು' ಹೆಣ್ಣು ಎಂಬುದು ಸ್ಪಷ್ಟವಾಯಿತಲ್ಲ.

ಈ ರೀತಿ ಗುಣವನ್ನು ಗಂಡಿಗೆ, ಹೆಣ್ಣಿಗೆ ಆರೋಪಿಸುವುದು ಎಷ್ಟು ಅಪಾಯಕಾರಿ ಅಲ್ಲವೇ ? ಗಂಡು ಗರ್ವ ತೋರಿಸಲು ಮನಸ್ಸಿಲ್ಲದಿದ್ದರೂ ತೋರಿಸಬೇಕಾಗುತ್ತದೆ. ಇಲ್ಲವಾದರೆ ಅವನ ಗಂಡಸುತನಕ್ಕೆ ಪೆಟ್ಟು ಬೀಳುತ್ತದೆ. ಹಾಗೆಯೇ ಹೆಣ್ಣು 'ಹೆಣ್ತನ' ತೋರಿಸದಿದ್ದರೆ ಗಂಡುಬೀರಿಯಾಗುತ್ತಾಳೆ.

ಕೃಪೆ : ಮೌನ ಮಾತು

'ACHALA' 108, Skyline Surabhi
14-9, Vidyapeeta Road
B.S.K. 3rd Stage,
Bangalore - 560 085

To :

Smt/Sri